
ಡಾ.ಪಿ.ವಿ.ನಾರಾಯಣ

ಬಳ್ಳಿಗಾವೆ



66

ಬಳ್ಳಿಗಾವೆ

ಡಾ॥ ಪಿ. ವಿ. ನಾರಾಯಣ

IBH

ಐಬಿಎಚ್ ಪ್ರಕಾಶನ

ಗಾಂಧಿನಗರ, ಬೆಂಗಳೂರು 560 009

BALLIGAVE— A monograph on Balligave, a historical Centre in Shimoga District, Karnataka, written in Kannada by Dr. P. V. Narayana and Published by G. K. Ananthram for IBH Prakashana Gandhinagar Bangalore 560 009.

ಬೆಲೆ : ರೂ. 4-00

ಛಾಯಾಚಿತ್ರಗಳು : ಬಿ. ಕೇಸರ್‌ಸಿಂಗ್ ಮುಖಚಿತ್ರ : ಯು. ಟಿ. ಸುರೇಶ್

ಮೂರನೆಯ ಮುದ್ರಣ : 1987. ಪ್ರಕಾಶಕರು : ಐಬಿಎಚ್ ಪ್ರಕಾಶನ ಇವರ ಪರವಾಗಿ ಜಿ. ಕೆ. ಅನಂತರಾಮ್ ಐದನೆಯ ಮುಖ್ಯರಸ್ತೆ ಗಾಂಧಿನಗರ ಬೆಂಗಳೂರು 560 009. ಮುದ್ರಕರು : ಎಚ್. ಎಸ್. ಎನ್. ರಾವ್ ಐಬಿಎಚ್ ಪ್ರಕಾಶನ ಪ್ರಿಂಟರಿ ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಬೆಂಗಳೂರು 560 054.

ಬಳ್ಳಿಗಾವೆ*

ಹನ್ನೊಂದು ಹನ್ನೆರಡನೆಯ ಶತಮಾನಗಳಲ್ಲಿ ಬಳ್ಳಿಗಾವೆ ತುಂಬ ಪ್ರಖ್ಯಾತವಾದ, ಪ್ರಮುಖವಾದ ಊರಾಗಿದ್ದಿತು. ಧರ್ಮಗಳಿಗೆ ಇಲ್ಲಿ ಸಿಗುತ್ತಿದ್ದ ಪ್ರೋತ್ಸಾಹಕ್ಕಾಗಿ, ಇಲ್ಲಿ ದೊರೆಯುತ್ತಿದ್ದ ಶ್ರೇಷ್ಠ ರೀತಿಯ ವಿದ್ಯಾಭ್ಯಾಸಕ್ಕಾಗಿ, ಇಲ್ಲಿ ನಿರ್ಮಿತವಾಗಿದ್ದ ಪವಿತ್ರ ದೇವಾಲಯಗಳಿಗಾಗಿ ಇದು ತುಂಬ ಹೆಸರುವಾಸಿಯಾದ ಊರಾಗಿತ್ತು.

ಬಳ್ಳಿಗಾವೆ ಈಗ ಒಂದು ಸಣ್ಣ ಹಳ್ಳಿ, ಕುಗ್ರಾಮ ಎನ್ನಬಹುದು. ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯಲ್ಲಿ ಶಿಕಾರಿಪುರ ತಾಲ್ಲೂಕಿದೆ. ಆ ತಾಲ್ಲೂಕಿನ ಶಿರಾಳಕೊಪ್ಪಕ್ಕೆ ಒಂದು ಮೈಲಿದೂರದಲ್ಲಿ ಅದೇ ಹೋಬಳಿಗೆ ಸೇರಿದ ಊರು ಈ ಬಳ್ಳಿಗಾವೆ. ಈ ಊರಿರುವ ಪ್ರದೇಶ ಮಲೆನಾಡೆನಿಸಿಕೊಳ್ಳುವುದಿಲ್ಲ. ಆದರೆ ಇದು ಮಲೆನಾಡಿಗೆ ಅಂಟಿಕೊಂಡ ಸೆರಗು. ಈ ಪ್ರದೇಶಕ್ಕೆ ಹೋದರೆ ಈಗಲೂ ಹಲವಾರು ಸಣ್ಣದೊಡ್ಡ ಕೆರೆಗಳು ಕಾಣಿಸುತ್ತವೆ. ಇವುಗಳಲ್ಲಿ ತಾವರೆ ಮುಂತಾದ ನೀರಿನಲ್ಲಿ ಬೆಳೆಯುವ ಹೂವುಗಳು ಬೆಳೆದಿರುವುದನ್ನು ನೋಡಬಹುದು. ನೀರು ಹೀಗೆ ಸಮೃದ್ಧವಾಗಿ ದೊರೆಯುವುದೆಂದಮೇಲೆ ಬೆಳೆಯೂ ಚೆನ್ನಾಗಿರಲೇಬೇಕು.

---

* ಈ ಗ್ರಂಥ ರಚನೆಗೆ ಬೇಕಾದ ಸಾಮಗ್ರಿ ಸಂಗ್ರಹಕ್ಕೆ ನೆರವಾದ ದಿವಂಗತ ಶ್ರೀ ಭೀಮಪ್ಪ ಮಾಸ್ತರರಿಗೂ ಶ್ರೀ ಅರಳಗುಪ್ಪೆ ಶ್ರೀಪಾದರಿಗೂ ಲೇಖಕನ ಕೃತಜ್ಞತೆಗಳು.

ಅಂತೆಯೇ ನಿಮಗೆ ಪೈರು–ಪಚ್ಚೆಗಳು ಕಣ್ಣಿಗೆ ಸಂತೋಷವನ್ನುಂಟು ಮಾಡುತ್ತವೆ. ಎಂದರೆ ಇಲ್ಲಿಯ ಪ್ರಕೃತಿ ನೋಡಲು ಸುಂದರ ವಾದುದು.

ಈಗ ಬಳ್ಳಿಗಾವಿಗೆ ಹೋದರೆ ನಿಮಗೆ ಬೇಕಾದಷ್ಟು ಶಾಸನ ಗಳು ದೊರೆಯುತ್ತವೆ. ಈವರೆಗೆ ಅಲ್ಲಿನ ಸುಮಾರು ಎಂಬತ್ತೈದು ಶಾಸನಗಳನ್ನು ಓದಿ ವಿದ್ವಾಂಸರು ಅಚ್ಚು ಹಾಕಿಸಿದ್ದಾರೆ. ಊರಿನ ಒಳಗೆ ಹೊರಗೆ ಎಲ್ಲಿ ನೋಡಿದರೂ ದೇವಸ್ಥಾನಗಳು ಸಿಕ್ಕುತ್ತವೆ, ಅಥವಾ ಹಿಂದೆ ಒಂದು ಕಾಲದಲ್ಲಿ ದೇವಸ್ಥಾನಗಳಿದ್ದು ಈಗ ಹಾಳಾಗಿರುವ ಗುರುತಾದರೂ ಸಿಕ್ಕುತ್ತವೆ. ಇಲ್ಲಿ ಸಿಕ್ಕುವ ಶಾಸನ ಗಳೆಲ್ಲ ಹದಿಮೂರನೇ ಶತಮಾನಕ್ಕೆ ಹಿಂದೆ ರಚಿಸಿ ನೆಟ್ಟಂತಹವು. ಇವುಗಳಲ್ಲಿ ಬಹುಪಾಲು ಶಾಸನಗಳು ಕನ್ನಡ ನಾಡನ್ನು ಚಾಲುಕ್ಯರು, ಕಲಚುರ್ಯರು ಎಂಬ ಎರಡು ಪ್ರಸಿದ್ಧ ರಾಜವಂಶಗಳು ಆಳು ತ್ತಿದ್ದ ಕಾಲಕ್ಕೆ ಸಂಬಂಧಿಸಿವೆ. ಇವರಾದ ಮೇಲೆ ಹೊಯ್ಸಳರು, ಯಾದವರು ಎಂಬ ರಾಜವಂಶಗಳು ಆಡಳಿತ ನಡೆಸಿದ್ದವು. ಈ ಶಾಸನಗಳು, ವೀರಗಲ್ಲುಗಳು, ಮಾಸ್ತಿಕಲ್ಲುಗಳು ಹಿಂದಿನ ವೈಭವದ ಕತೆಯನ್ನು ಹೇಳುತ್ತ ಈಗಲೂ ನಿಂತಿವೆ.

ಎಂಟುನೂರು, ಒಂಬೈನೂರು ವರ್ಷಗಳ ಹಿಂದೆ, ಈಗ ಹಳ್ಳಿಯಾದ, ಬಳ್ಳಿಗಾವೆ ದೊಡ್ಡ ಪಟ್ಟಣವಾಗಿತ್ತು ; ಬನವಾಸಿ ೧೨೦೦೦ ಎಂಬ ಪ್ರಾಂತ್ಯದ ರಾಜಧಾನಿ. ಇಲ್ಲಿ ಒಬ್ಬ ಸಾಮಂತ ರಾಜ ಆಳುತ್ತಿದ್ದ, ಈ ಪ್ರಾಂತ್ಯ ಈಗಿನ ಬಿಜಾಪುರ ಜಿಲ್ಲೆಯ ಕಲ್ಯಾಣವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದ ಚಕ್ರವರ್ತಿಗಳ ಅಧೀನದಲ್ಲಿತ್ತು. ಕಲ್ಯಾಣವು ತುಂಬ ಪ್ರಸಿದ್ಧವಾದ ಪಟ್ಟಣ–ಆ ಕಾಲಕ್ಕೆ. ಚಕ್ರವರ್ತಿಯ ರಾಜಧಾನಿಯೆಂದರೆ ಅದರ ವೈಭವ ಕೇಳಬೇಕೆ ? ಹಾಗೆಯೇ ರಾಜಧಾನಿಯಾದ ಬಳ್ಳಿಗಾವೆ 'ಮರಿಕಲ್ಯಾಣ' ಎಂದು ಹೆಸರುವಾಸಿಯಾಗಿತ್ತು.

ಬಳ್ಳಿಗಾವೆ ರಾಜಧಾನಿಯಾಗಿದ್ದ ಬನವಾಸಿ ಹನ್ನೆರಡುಸಾವಿರ ಎಂಬ ಪ್ರದೇಶ ತುಂಬ ಸುಂದರವಾದ ನಾಡು. ಕನ್ನಡದ ಆದಿಕವಿ ಪಂಪ 'ಯಾರು ಅಡ್ಡಿ ಮಾಡಿದರೂ ನನ್ನ ಮನಸ್ಸು ಮಾತ್ರ ಬನ ವಾಸಿ ದೇಶವನ್ನು ನೆನೆಸಿಕೊಳ್ಳುತ್ತದೆ' ಎಂದು ಹೇಳಿದ್ದಾನೆ. ಎಂದರೆ ಅವನ ಮನಸ್ಸನ್ನು ಈ ಬನವಾಸಿ ನಾಡು ತುಂಬ ಆಕರ್ಷಿಸಿತ್ತು. ಅನೇಕ ಶಾಸನಗಳಲ್ಲಿ ಈ ದೇಶದ ವರ್ಣನೆ ಮಾಡಿದ್ದಾರೆ : ಇದು ಸುಖದ ಆವಾಸಸ್ಥಾನ. ಲಕ್ಷ್ಮಿಯು ಎಂದರೆ ಐಶ್ವರ್ಯವು ಹುಟ್ಟಿದ ಸಮುದ್ರದ ಹಾಗಿತ್ತು. ಅಭ್ಯುದಯಕ್ಕೆ ನೆಲೆವೀಡು, ಸತ್ಯದ ತವರ್ಮನೆ, ಸುಂದರರಾದ, ಸುಂದರಿಯರಾದ ಗಂಡು ಹೆಣ್ಣು ಗಳಿಂದ ಕೂಡಿದ ಪ್ರದೇಶ—ಮುಂತಾಗಿ.

ಇಂತಹ ದೇಶದ ರಾಜಧಾನಿ ಬಳ್ಳಿಗಾವೆ. ಇದಕ್ಕೆ ಬಲಿಪುರ, ಬಳ್ಳಿಪುರ, ಬಳ್ಳಿಗಾಂವೆ, ಬಳ್ಳಿಗ್ರಾಮ ಮುಂತಾದ ಹೆಸರುಗಳೂ ಇದ್ದವು. ಇದು ಒಳ್ಳೆಯ ಜನಗಳೆಂಬ ಐಶ್ವರ್ಯದಿಂದ ತುಂಬಿತ್ತು. ಪಟ್ಟಣಗಳ ತಾಯಿ ಎಂಬ ಕೀರ್ತಿ ಈ ಊರಿನದು. ಇದನ್ನು ಅನಾದಿಪಟ್ಟಣ ಎಂದು ಶಾಸನಗಳಲ್ಲಿ ಕರೆದಿದ್ದಾರೆ. ಎಂದರೆ ಇದು ತುಂಬ ಪ್ರಾಚೀನವಾದ ನಗರ. ಇದು ಆ ಕಾಲದಲ್ಲಿ ತುಂಬ ಶ್ರೇಷ್ಠ ವಾದ, ಪವಿತ್ರವಾದ ನಗರ ಎಂದು ಹೆಸರುಗೊಂಡಿತ್ತು. ವಾರಣಾಸಿ ಗಿಂತ ಎರಡರಷ್ಟು, ಕೇದಾರಕ್ಕಿಂತಲೂ ನೂರರಷ್ಟು, ಶ್ರೀಶೈಲ ಕ್ಕಿಂತಲೂ ಸಾವಿರದಷ್ಟು ಪವಿತ್ರವಾದ ಊರು ಎಂದು ಆ ಕಾಲದ ಜನರು ಇದರ ಬಗ್ಗೆ ಗೌರವವನ್ನು ಪಡೆದಿದ್ದರು ! ಬಳ್ಳಿಗಾವೆ ಯನ್ನು ದಕ್ಷಿಣ ಕೇದಾರ ಎಂದು ಕರೆಯುತ್ತಿದ್ದರು. ಈ ಪ್ರದೇಶ ವನ್ನು ಕುಂತಳ ದೇಶವೆಂದೂ ಕರೆಯುತ್ತಿದ್ದರು. ಬಳ್ಳಿಗಾವಿಗೆ 'ಬಲಿಪುರ'ವೆಂಬ ಹೆಸರೂ ಇತ್ತೆಂದು ನೋಡಿದೆವು. ಈ ರೀತಿ ಹೆಸರು ಬರಲು ಒಂದು ಕಾರಣವನ್ನು ಹೇಳುತ್ತಾರೆ. ರಾಕ್ಷಸನಾದ ಬಲಿಚಕ್ರವರ್ತಿಯು ಈ ಊರಲ್ಲಿ ನೆಲಸಿ, ಅನೇಕ ದಾನಧರ್ಮ

ಗಳನ್ನು ಮಾಡಿದ. ಇದರಿಂದ ಅವನು ಇಂದ್ರನೇ ಎಂಬ ಕೀರ್ತಿ ಬಂದಿತು. ಅಂಥ ಬಲಿಚಕ್ರವರ್ತಿಯ ಊರಾದುದರಿಂದ ಇದಕ್ಕೆ 'ಬಲಿಪುರ' ಎಂಬ ಹೆಸರುಂಟಾಯಿತು. ಈ ಊರು 'ದಕ್ಷಿಣಕೇದಾರ' ವೆಂದು ಪ್ರಸಿದ್ಧವಾಗಿತ್ತು. ಜನರ ಪಾಪಗಳನ್ನು ತೊಳೆಯುವ ಪುಣ್ಯಪ್ರದೇಶ ಎಂಬುದು ಇದರ ಅರ್ಥ.

ಆಗ ಬಳ್ಳಿಗಾವೆಯು ನಾಲ್ಕು ಮೈಲಿ ಉದ್ದ, ಮೂರು ಮೈಲಿ ಅಗಲವಾದ ವಿಸ್ತಾರವಾದ ನಗರವಾಗಿದ್ದಿತೆಂದು ಹೇಳುತ್ತಾರೆ. ಇದು ಮೂರು ಪುರಗಳಿಂದ ಎಂದರೆ ಬಡಾವಣೆಗಳಿಂದಲೂ, ಏಳು ಬ್ರಹ್ಮಪುರಿಗಳಿಂದಲೂ, ಐದು ವಿದ್ಯಾಪೀಠಗಳಿಂದಲೂ, ಅನೇಕ ಅಗ್ರಹಾರಗಳಿಂದಲೂ, ನೂರಾರು ದೇವಸ್ಥಾನಗಳಿಂದಲೂ ಶೋಭಿಸುತ್ತಿದ್ದ ನಗರವಾಗಿತ್ತು. ಇಲ್ಲಿನ ಜನಗಳು ಬೇರೆಯವರ ಹಿತವನ್ನು ಸಾಧನೆ ಮಾಡುವವರು, ಸತ್ಯವನ್ನು ಪರಿಪಾಲಿಸುವವರು, ಜ್ಞಾನದ ನಿಧಿಗಳು, ಅತ್ಯಂತ ಧರ್ಮನಿಷ್ಠರು, ಶ್ರೇಷ್ಠ ಕವಿಗಳಿಗೆ ಪ್ರೋತ್ಸಾಹ ನೀಡುವವರು, ಬ್ರಹ್ಮ, ವಿಷ್ಣು, ಈಶ್ವರ, ಜಿನ ಮುಂತಾದ ದೇವರುಗಳನ್ನು ಪೂಜಿಸಿ ನಿರ್ಮಲವಾದ ಮನಸ್ಸಿನಿಂದ ಕೂಡಿದವರು ಎಂಬ ಹೊಗಳಿಕೆಗೆ ಪಾತ್ರವಾಗಿದ್ದರು. ಇಲ್ಲಿನ ಜನಗಳು ತಮ್ಮ ನಶ್ವರವಾದ, ಎಂದರೆ ಬಹುಕಾಲ ಉಳಿಯದ, ಐಶ್ವರ್ಯವನ್ನು ದಾನಮಾಡಿ ಶಾಶ್ವತವಾದ ಪುಣ್ಯವನ್ನು ಸಂಪಾದಿಸುತ್ತಿದ್ದರಂತೆ ! ಇಲ್ಲಿನ ಜನರು ಕ್ಷಮಾಶೀಲರಾಗಿದ್ದರಂತೆ, ಸಲ್ಲಕ್ಷಣಗಳಿಂದ ಕೂಡಿದವರಂತೆ.


ಬಳ್ಳಿಗಾವಿಗೆ 'ಅನಾದಿಪಟ್ಟಣ' ವೆಂಬ ಬಿರುದಿದ್ದಿತೆಂದು ಆಗಲೇ ಹೇಳಿದೆ. ಎಂದರೆ ಇದು ತುಂಬ ಹಳೆಯ ಊರೆಂದು ಅರ್ಥ. ಹನ್ನೆರಡನೆಯ ಶತಮಾನಕ್ಕೇ ಈ ಊರಿಗೆ ಈ ಹೆಸರು ಬಂದಿರಬೇಕಾದರೆ ಆ ಕಾಲಕ್ಕಿಂತ ತುಂಬ ಹಿಂದೆಯೇ ಈ ಊರು ನಿರ್ಮಾಣಗೊಂಡಿರಬೇಕು. ಇದು ರಾಜಧಾನಿಯಾಗಿದ್ದುದರಿಂದ

ಇಲ್ಲಿ ತುಂಬ ಚಟುವಟಿಕೆಗಳು ನಡೆಯುತ್ತಿದ್ದವು. ಬಂದು ಹೋಗುವ ಜನರು ಹೆಚ್ಚು. ನಾನಾ ಪಂಗಡಗಳಿಗೆ, ಧರ್ಮಗಳಿಗೆ ಸೇರಿದ ಜನರು ಇಲ್ಲಿ ವಾಸಿಸುತ್ತಿದ್ದರು. ಇದರ ಕುರುಹಾಗಿ ಇಲ್ಲಿ ಅನೇಕ ದೇವಸ್ಥಾನಗಳಲ್ಲದೆ ಅಸಂಖ್ಯವಾದ ಲಿಂಗಗಳು ಊರ ಒಳ ಹೊರಗೆ ಬಿದ್ದಿವೆ. ಹಾಗೆಯೇ ಜಿನನ ಪ್ರತಿಮೆಗಳು ಈಗಲೂ ಕಾಣುತ್ತವೆ. ಆದರೆ ಅವುಗಳಲ್ಲಿ ಬಹುಪಾಲು ಒಡೆದುಹೋಗಿವೆ. ಈ ಊರಿನಲ್ಲಿ ಹಲವಾರು ಜೈನ ಬಸದಿಗಳಿದ್ದಿರಬೇಕೆಂದು ಇದ ರಿಂದ ಗೊತ್ತಾಗುತ್ತದೆ. ಆದರೆ ಎಲ್ಲಿ ಅವುಗಳಿದ್ದಿರಬೇಕೆಂಬುದನ್ನು ನಾವೀಗ ಸರಿಯಾಗಿ ಗುರುತಿಸಲು ಸಾಧ್ಯವಾಗದಂತೆ ಅವೆಲ್ಲ ಈಗ ನಾಶವಾಗಿವೆ. ಅನೇಕ ವಿಷ್ಣು ದೇವಸ್ಥಾನಗಳೂ ಇಲ್ಲಿದ್ದವು, ಶಿವಾ ಲಯಗಳಿದ್ದವು, ಬೌದ್ಧರ ವಿಹಾರಗಳೂ ಇಲ್ಲಿ ನಿರ್ಮಿತವಾಗಿದ್ದವು. ಆದರೆ ಅವುಗಳಲ್ಲಿ ಬಹುಪಾಲು ಈಗ ಹಾಳಾಗಿಹೋಗಿವೆ. ಈ ಊರಿನಲ್ಲಿ ದೇವಸ್ಥಾನಗಳು, ದೇವರುಗಳು ಎಷ್ಟು ಇದ್ದುವೆಂಬು ದಕ್ಕೆ ಒಂದು ಸ್ವಾರಸ್ಯವಾದ ಕಥೆಯನ್ನು ಹೇಳುತ್ತಾರೆ. ಒಂದು ಸಲ ಒಬ್ಬ ಶೆಟ್ಟಿ ಒಂದು ಗೋಣಿಚೀಲದ ತುಂಬ ಕಡಲೆಕಾಳನ್ನು ತುಂಬಿಕೊಂಡು ಬಂದನಂತೆ. ಪ್ರತಿ ದೇವರನ್ನು ಪೂಜೆಮಾಡುವುದು, ಆ ದೇವರಿಗೆ ಒಂದೊಂದೇ ಕಡಲೆಕಾಳನ್ನು ನೈವೇದ್ಯಮಾಡಿ ಇಡು ವುದು—ಹೀಗೆ ಮಾಡಿದನಂತೆ. ಕೊನೆಗೆ ಮೂಟೆಯ ಕಡಲೆಕಾಳೆಲ್ಲ ಮುಗಿದುಹೋದರೂ ಒಂದೇ ಒಂದು ಬಸವಣ್ಣನಿಗೆ ಮಾತ್ರ ನೈವೇದ್ಯಕ್ಕೆ ಸಾಲದೆ ಹೋಯಿತಂತೆ ! ಆಗ ಆ ಬಸವಣ್ಣ ಮುನಿಸಿ ಕೊಂಡು ಹೋಗಿ ಈಗ ಜಿಡ್ಡಿಕೆರೆ ಎಂದು ಕರೆಯುವ ಕೆರೆಯ ಏರಿಯ ಮೇಲೆ ಹೋಗಿ ಕುಳಿತುಕೊಂಡಿತಂತೆ ! ಈಗ ಒಂದು ಬಸವಣ್ಣನ ವಿಗ್ರಹವನ್ನು ತೋರಿಸಿ ಅದನ್ನು 'ಕಡಲೆಕಾಳು ಬಸ ವಣ್ಣ' ಎಂದು ಹೇಳುತ್ತಾರೆ. ಈ ಕಥೆಯು ನಿಜವಾಗಿ ನಡೆಯಿತೋ

ಇಲ್ಲವೋ ಹೇಳುವುದಕ್ಕಾಗುವುದಿಲ್ಲ. ಆದರೆ ಆ ಊರಲ್ಲಿ ಎಷ್ಟು ದೇವರುಗಳು ನೆಲೆಸಿದ್ದವೆನ್ನುವುದನ್ನು ಈ ಕಥೆ ಸೂಚಿಸುತ್ತದೆ.

ನಮ್ಮ ಪೂರ್ವಿಕರಲ್ಲಿ ಬಹುಪಾಲು ಜನರು ತುಂಬ ದೈವ ಭಕ್ತರು. ಅವರಿಗೆ ದೇವಸ್ಥಾನಗಳನ್ನು ನಿರ್ಮಿಸುವುದರಿಂದ, ಅವುಗಳಿಗೆ ದಾನಮಾಡುವುದರಿಂದ ತುಂಬ ಪುಣ್ಯ ಬರುತ್ತದೆಂಬ ನಂಬಿಕೆಯಿತ್ತು. ದೇವಸ್ಥಾನಗಳಿಗೆ ದಾನಮಾಡಿದ ನೂರಾರು ಶಾಸನಗಳು ಕನ್ನಡ ನಾಡಿನಲ್ಲಿ ದೊರೆಯುತ್ತವೆ. ದೊರೆಗಳಿಂದ ಹಿಡಿದು ಸಾಮಾನ್ಯ ಜನರವರೆಗೆ ಎಲ್ಲ ರೀತಿಯ ಜನರೂ ಎಲ್ಲ ಜಾತಿಗಳ ಜನಗಳೂ ದೇವರಿಗಾಗಿ ದತ್ತಿಯನ್ನು ಬಿಟ್ಟಿದ್ದಾರೆ. ತಮ್ಮ ತಮ್ಮ ಅಭಿರುಚಿಗಳಿಗೆ ತಕ್ಕಹಾಗೆ ದೇವಸ್ಥಾನಗಳನ್ನು ನಿರ್ಮಾಣಮಾಡಿಸಿದರು. ಉತ್ತರ ಭಾರತದ ದೇವಸ್ಥಾನಗಳಂತೆ ದಕ್ಷಿಣ ಭಾರತದ ದೇವಸ್ಥಾನಗಳಿಲ್ಲ. ಹಾಗೆಯೇ ರಾಮೇಶ್ವರದ ದೇವಸ್ಥಾನಗಳಿಗೂ ಹಳೆಯಬೀಡಿನ ದೇವಾಲಯಕ್ಕೂ ವ್ಯತ್ಯಾಸವಿದೆ. ಹಾಗೆಯೇ ಬೇರೆ ಬೇರೆ ಧರ್ಮಗಳವರು ನಿರ್ಮಿಸಿದ ದೇವಸ್ಥಾನಗಳಲ್ಲಿ ವ್ಯತ್ಯಾಸವಿರುತ್ತದೆ. ಕಾಲಕಾಲಕ್ಕೆ ಈ ದೇವಸ್ಥಾನಗಳನ್ನು ಕಟ್ಟುವ ರೀತಿ ಬದಲಾಯಿಸುತ್ತದೆ. ಎಂದರೆ ಈ ದೇವಸ್ಥಾನಗಳು ನಮ್ಮ ಪೂರ್ವಿಕರ ಕಟ್ಟಡ ಕಟ್ಟುವ ಕಲೆಯನ್ನು ಅಥವಾ ವಾಸ್ತುಶಿಲ್ಪವನ್ನು ತೋರಿಸುತ್ತದೆ. ಬಳ್ಳಿಗಾವೆಯಲ್ಲಿ ಈಗ ನಮಗೆ ಕಾಣುವ ದೇವಾಲಯಗಳಲ್ಲಿ, ದೇವರ ವಿಗ್ರಹಗಳಲ್ಲಿ ಮುಖ್ಯವಾದುವುಗಳನ್ನು ಪರಿಚಯ ಮಾಡಿಕೊಳ್ಳೋಣ.

ಶಿರಾಳಕೊಪ್ಪದಿಂದ ಬಳ್ಳಿಗಾವೆಗೆ ಹೋದರೆ ಮೊದಲು ನಿಮಗೆ ಕಾಣಿಸುವುದೆಂದರೆ ಕೇದಾರೇಶ್ವರ ದೇವಸ್ಥಾನ. ಈ ದೇವಸ್ಥಾನದಿಂದಾಗಿಯೇ ಬಳ್ಳಿಗಾವೆಗೆ ದಕ್ಷಿಣ ಕೇದಾರ ಎಂಬ ಹೆಸರು ಬರಲು ಕಾರಣವಾಯಿತು. ಇದು ತಾವರೆಗೆರೆಯ ಎದುರಿನ ದಂಡೆಯ ಮೇಲೆ ಕಟ್ಟಲ್ಪಟ್ಟ ಸುಂದರವಾದ ದೇವಸ್ಥಾನ. ಇದು



ಕೇದಾರೇಶ್ವರ ದೇವಾಲಯ

ಚಾಳುಕ್ಯ ದೊರೆಗಳು ಕಟ್ಟುತ್ತಿದ್ದ ವಿಶಿಷ್ಟ ರೀತಿಯ ದೇವಸ್ಥಾನಗಳಲ್ಲಿ ಅತ್ಯಂತ ಹಳೆಯದೆಂದು ವಿದ್ವಾಂಸರು ಹೇಳುತ್ತಾರೆ. ಇದು ಒಂದು ತ್ರಿಕೂಟವಾಗಿದೆ. ಎಂದರೆ ಇದರಲ್ಲಿ ಮೂರು ಗರ್ಭಗುಡಿಗಳಿವೆ: ದೇವಾಸ್ಥಾನವನ್ನು ಪ್ರವೇಶಿಸಿದರೆ ಎದುರುಗಡೆ, ಎಡಗಡೆ ಹಾಗೂ ಬಲಗಡೆಗಳಲ್ಲಿ. ಭಾರತದ ಉತ್ತರದ ತುದಿಯಲ್ಲಿ ಹಿಮಾಲಯ ಪರ್ವತ ಶ್ರೇಣಿಗಳ ತಪ್ಪಲಿನಲ್ಲಿ ಕೇದಾರವಿದೆ. ಅಲ್ಲಿನ ದೇವಾಲಯವನ್ನು, ದೇವರನ್ನು ನೋಡಲು ದಕ್ಷಿಣ ದೇಶದಲ್ಲಿ ವಾಸಿಸುವವರಿಗೆ ತುಂಬ ಕಷ್ಟಕರವಾದುದು. ಆದ್ದರಿಂದ ಕೇದಾರೇಶ್ವರನು ದಕ್ಷಿಣ ಭಾರತದ ಜನಗಳ ಮೇಲೆ ಕರುಣೆಯಿಟ್ಟು ಇಲ್ಲಿ ಬಂದು ನೆಲೆಸಿದನೆಂದು ಇಲ್ಲಿನ ಜನರಲ್ಲಿ ಒಂದು ನಂಬಿಕೆಯಿದೆ. ಈ ಕೇದಾರೇಶ್ವರ ಲಿಂಗವನ್ನು ಬಲಿ ಚಕ್ರವರ್ತಿಯು ಪೂಜಿಸಿದನೆಂಬ ಪ್ರತೀತಿಯಿದೆ. ಈ ದೇವಾಲಯದ ಆಡಳಿತವನ್ನು ನಡೆಸುತ್ತಿದ್ದವರು ಕಾಳಾಮುಖರೆಂಬ ಶೈವಸಂಪ್ರದಾಯಕ್ಕೆ ಸೇರಿದವರು. ಇವರು ಮೂಲತಃ ಕಾಶ್ಮೀರದವರು. ಉತ್ತರ ಭಾರತದ ಕೇದಾರದ ನೆನಪಿನ ಮೇಲೆ ಈ ದೇವರನ್ನು 'ಕೇದಾರೇಶ್ವರ'ನೆಂದೂ, ದೇವಸ್ಥಾನವನ್ನು 'ಕೇದಾರೇಶ್ವರ ದೇವಾಲಯ'ವೆಂದೂ ಕರೆದಿರಬೇಕು.

ಈ ದೇವಾಲಯದಲ್ಲಿ ಮೂರು ಗರ್ಭಗೃಹಗಳಿವೆಯೆಂಬುದನ್ನು ತಿಳಿದೆವು. ಪ್ರತಿಯೊಂದು ಗರ್ಭಗುಡಿಯ ಮೇಲೂ ಒಂದೊಂದು ಗೋಪುರವು ರಚಿತವಾಗಿದೆ. ಇದನ್ನು ಚಾಳುಕ್ಯ ದೊರೆಗಳ ಕಾಲದಲ್ಲಿ ಕಟ್ಟಿಸಿದರೂ ಗೋಪುರಗಳ ಬಳಿ ಎರಡು ಹುಲಿಯನ್ನು ಸೀಳುತ್ತಿರುವ ಬಾಲಕನೊಬ್ಬನ ಚಿತ್ರವಿರುವ ಶಿಲ್ಪಗಳಿವೆ. ಇದು ಆಮೇಲೆ ಕನ್ನಡ ನಾಡನ್ನು ಆಳಿದ ಹೊಯ್ಸಳ ಎಂಬ ರಾಜಮನೆತನದವರ ಗುರುತು, ಚಿಹ್ನೆ. ದೇವಸ್ಥಾನವು ಪೂರ್ತಿ ಒಂದು ಕಾಲದಲ್ಲಿಯೇ ಒಬ್ಬನ ದಾನದಿಂದಲೇ ನಿರ್ಮಿತ

ವಾದದ್ದಲ್ಲ. ಬೇರೆ ಬೇರೆಯ ವ್ಯಕ್ತಿಗಳು ಬೇರೆ ಬೇರೆಯ ಕಾಲದಲ್ಲಿ ಒಂದೊಂದು ಭಾಗವನ್ನು ನಿರ್ಮಿಸಿದರು.

ಈ ದೇವಸ್ಥಾನವು ಪೂರ್ವದಿಕ್ಕಿಗೆ ಅಭಿಮುಖವಾಗಿದೆ. ಮಧ್ಯದ ಗರ್ಭಗೃಹದಲ್ಲಿ ಕೇದಾರೇಶ್ವರಲಿಂಗವಿದೆ. ಇದು ಕಪ್ಪು ಕಲ್ಲಿನಿಂದ ಮಾಡಿದ ಲಿಂಗ. ಅದರ ಬಲಕ್ಕೆ ಮತ್ತೊಂದು ಲಿಂಗವಿದೆ. ಅದರ ಜಲಹರಿ ಬಲಗಡೆಗಿದೆ ; ಇದು ಬ್ರಹ್ಮನನ್ನು ಸೂಚಿಸುತ್ತದೆ. ಬ್ರಹ್ಮನ ವಿಗ್ರಹವನ್ನು ಪೂಜೆ ಮಾಡುವ ಸಂಪ್ರದಾಯವಿಲ್ಲದಿರುವದರಿಂದ ಈ ರೀತಿ ಜಲಹರಿ ಬಲಕ್ಕಿರುವ ಲಿಂಗವನ್ನೇ ಸ್ಥಾಪಿಸುತ್ತಾರೆ.ಇದರ ಎದುರಿಗೆ ಮೂರನೆಯ ಗರ್ಭಗುಡಿ. ಇದರಲ್ಲಿ ತುಂಬ ಸುಂದರವಾದ ಕೇಶವನ ವಿಗ್ರಹವಿದೆ. ಸುಮಾರು ಮೂರು ಅಡಿ ಎತ್ತರವಿರುವ ಈ ವಿಗ್ರಹದ ಕೆತ್ತನೆ ತುಂಬ ನಯವಾದುದು. ನಡುವೆಯಿರುವ ಗರ್ಭಗುಡಿಯ ಬಾಗಿಲುವಾಡದ ಮೇಲ್ಭಾಗದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ಈ ಮೂವರ ಚಿತ್ರಗಳೂ ಕೆತ್ತಲ್ಪಟ್ಟಿವೆ ; ಇದು ಆ ಕಾಲದ ಧರ್ಮಸಹಿಷ್ಣುತೆಯ ಪ್ರತೀಕ. ತಾವು ಪೂಜಿಸುವ ದೇವರೇ ದೊಡ್ಡವರೆಂದು ಬೇರೆಯವರ ದೇವರನ್ನು ಅವಮಾನಿಸಲಿಲ್ಲ.

ಈ ದೇವಸ್ಥಾನದ ಮಧ್ಯದ ಭಾಗದಲ್ಲಿ ಹಾಗೂ ಮುಖ ಮಂಟಪದಲ್ಲಿ ಅನೇಕ ಸುಂದರವಾದ ಕಂಬಗಳಿವೆ, ಮುಖ ಮಂಟಪದ ಮೇಲುಛಾವಣಿಯಲ್ಲಿ ಎಂಟು ಕಡೆಗಳಲ್ಲಿಯೂ ಆಯಾ ದಿಕ್ಪಾಲಕರ ವಾಹನಗಳನ್ನು ಕೆತ್ತಲಾಗಿದೆ. ಇಲ್ಲಿಯೇ ಸುಮಾರು ಐದು ಅಡಿ ಎತ್ತರದ ನಂದಿಯ ವಿಗ್ರಹವಿದೆ. ಗರ್ಭಗೃಹದ ಮುಂದಿನ ಮೇಲ್ಛಾವಣಿಯಲ್ಲಿ ದೊಡ್ಡ ಪದ್ಮವನ್ನು ಕೆತ್ತಿದ್ದಾರೆ. ದೇವಾಲಯದ ಒಳಗೆ ಸುತ್ತಲೂ ಗೋಡೆಗೆ ಅಂಟಿಕೊಂಡಂತೆ ಜಗುಲಿಯಿದೆ. ಗೋಪುರಗಳಲ್ಲಿ ಹಾಗೂ ಮುಖ್ಯ ಮಂಟಪದ ಬಾಗಿಲಲ್ಲಿ ಸಿಂಹಲಲಾಟಗಳಿವೆ. ಸಿಂಹ ಬಾಯಿತೆಗೆದು




ಕೇದಾರೇಶ್ವರ ದೇವಾಲಯದ ದ್ವಾರದ ಮೇಲ್ಭಾಗ : ಸಿಂಹಲಲಾಟ

ಕೊಂಡಿರುವ ಚಿತ್ರವನ್ನು ಸಿಂಹಲಲಾಟವೆನ್ನುತ್ತಾರೆ. ದೇವಸ್ಥಾನದ ಗೋಡೆಯನ್ನು ಐದು ಹಂತಗಳಲ್ಲಿ ಕೆತ್ತಿದ ಕಲ್ಲುಗಳನ್ನು ಜೋಡಿಸಿ ನಿರ್ಮಿಸಿದ್ದಾರೆ. ಮೇಲ್ಭಾಗದ ಹಂತದಲ್ಲಿ ಸುತ್ತಲೂ ನಾಟ್ಯದ ವಿವಿಧ ಭಂಗಿಗಳನ್ನು ಚಿತ್ರಿಸುವ ಸುಂದರವಾದ ಕೆತ್ತನೆಯಿದೆ. ಈಗಲೂ ಪ್ರತಿ ದಿನ ಇಲ್ಲಿ ಪೂಜೆ ನಡೆಯುತ್ತದೆ, ವರ್ಷಕ್ಕೊಂದು ಬಾರಿ ಉತ್ಸವವೂ ಆಗುತ್ತದೆ.

ಈ ದೇವಸ್ಥಾನದ ಪ್ರಾಕಾರದಲ್ಲಿಯೇ ಅದರ ಎಡಗಡೆಗೆ ಗೋಪುರವಿಲ್ಲದ ಒಂದು ದೇವಸ್ಥಾನವಿದೆ ; ಇದು ಕೇದಾರೇಶ್ವರ ದೇವಾಲಯಕ್ಕಿಂತ ಚಿಕ್ಕದು. ಇದು ನಖರೇಶ್ವರ ಅಥವಾ ನಗರೇಶ್ವರ ದೇವಾಲಯ. ಪಟ್ಟದ ಕಲ್ಲಿನಲ್ಲಿದ್ದ ವೀರ 'ಬಣಂಜು ಧರ್ಮ' ವೆಂಬ ವ್ಯಾಪಾರಿಗಳ ಸಂಘವೊಂದು ಈ ದೇವಾಲಯವನ್ನು ಕಟ್ಟಿಸಿತು. ಇದಕ್ಕೆ ಪ್ರಭುದೇವರ ಮಂಟಪವೆಂದು ಜನಸಾಮಾನ್ಯರು ಕರೆಯುವ ಹೆಸರೂ ಇದೆ. ವೀರಶೈವ ಶರಣರಲ್ಲಿ, ವಚನಕಾರರಲ್ಲಿ ಒಬ್ಬ ಪ್ರಮುಖನಾದ ಅಲ್ಲಮಪ್ರಭು ಈ ಊರಿನಲ್ಲಿಯೇ ಹುಟ್ಟಿದವನೆಂದು ಹರಿಹರನೆಂಬ ಕವಿ 'ಪ್ರಭುದೇವರ ರಗಳೆ' ಎಂಬ ತನ್ನ ಕಾವ್ಯದಲ್ಲಿ ಹೇಳುತ್ತಾನೆ. ಅಲ್ಲಮಪ್ರಭುವು ವಿದ್ಯಾರ್ಥಿಯಾಗಿದ್ದಾಗ ಕೇದಾರೇಶ್ವರ ದೇವಾಲಯದ ಆಡಳಿತಕ್ಕೆ ಒಳಪಟ್ಟಿದ್ದ ವಿದ್ಯಾಶಾಲೆಯಲ್ಲಿ ಓದುತ್ತಿದ್ದನಂತೆ. ಆತ ಈ ದೇವಾಲಯದಲ್ಲಿ ಕುಳಿತು ವ್ಯಾಸಂಗ ಮಾಡುತ್ತಿದ್ದುದರಿಂದ ಇದಕ್ಕೆ ಪ್ರಭುದೇವರ ಮಂಟಪವೆಂದು ಹೆಸರಾಯಿತೆಂಬುದಾಗಿ ಹೇಳುತ್ತಾರೆ. ಜಾತ್ರೆಯ ಸಮಯದಲ್ಲಿ ಪ್ರಭು ದೇವರಿಗೆ ಪ್ರಥಮ ಪೂಜೆಯನ್ನು ಸಲ್ಲಿಸುವ ವಾಡಿಕೆ ಈಗಲೂ ಉಂಟಂತೆ.

ಕೇದಾರೇಶ್ವರ ದೇವಸ್ಥಾನದ ಪ್ರಾಂಗಣದಲ್ಲಿಯೇ ಕೆಲವು ಶಾಸನಗಳಿವೆ ; ವೀರಗಲ್ಲು, ಮಾಸ್ತಿಕಲ್ಲುಗಳು ನೆಡಲ್ಪಟ್ಟಿವೆ ; ಅನೇಕ ದೇವತಾ ವಿಗ್ರಹಗಳಿವೆ. ಇರುವ ವಿಗ್ರಹಗಳಲ್ಲಿ ಒಂದು



ತ್ರಿಪುರಾಂತಕೇಶ್ವರ ದೇವಾಲಯದ ಬಾಗಿಲವಾಡದಲ್ಲಿನ ಶಿಲ್ಪ

ಸಪ್ತಮಾತೃಕೆಯರದು ; ಸಾಲಾಗಿ ಒಂದೇ ಕಲ್ಲಿನಲ್ಲಿ ಬ್ರಾಹ್ಮಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ, ಚಾಮುಂಡಿಯರ ವಿಗ್ರಹಗಳನ್ನು ಕ್ರಮವಾಗಿ ಕೆತ್ತಲಾಗಿದೆ. ತಾರಾಭಗವತಿ ಎಂಬ ಬೌದ್ಧ ದೇವತೆಯ ವಿಗ್ರಹವೊಂದೂ ಇಲ್ಲಿದೆ. ಆದರೆ ಈಗ ಇದು ಮುಂಡ (ತಲೆ)ವನ್ನು ಕಳೆದುಕೊಂಡಿದೆ. ಉಳಿದ ಭಾಗವನ್ನು ನೋಡಿದರೂ ಇದು ಸುಂದರವಾದ ವಿಗ್ರಹ ವಾಗಿದ್ದಿತೆಂಬುದು ಅರ್ಥವಾಗುತ್ತದೆ. ಇಂಥ ಅಮೂಲ್ಯವಾದ

ಕೆತ್ತನೆಗಳ ಬೆಲೆಯನ್ನು ತಿಳಿಯದೆ ಅಜ್ಞಾನಿಗಳಾದ ಜನರು ಅವು ಗಳನ್ನು ಹಾಳು ಮಾಡುತ್ತಾರೆ. ಅವುಗಳನ್ನು ಕಾಪಾಡಬೇಕಾದದ್ದು ನಮ್ಮ ಧರ್ಮ. ಹಾಗೆಯೇ ಸೂರ್ಯದೇವರ ವಿಗ್ರಹ ತುಂಬ ಸೊಗಸಾಗಿದೆ : ದ್ವಾರಪಾಲಕರ ವಿಗ್ರಹಗಳೂ ಇವೆ. ಈ ದೇವಾ ಲಯದ ಮಹಾದ್ವಾರವನ್ನು ಎರಡನೆಯ ವೀರಬಲ್ಲಾಳನ ಹೆಂಡತಿ ಕೇತಲದೇವಿಯು ಕಟ್ಟಿಸಿದಳಂತೆ.

ಕೇದಾರೇಶ್ವರ ದೇವಸ್ಥಾನದ ಬಲಕ್ಕೆ ಒಂದು ಜಗುಲಿಯಿದೆ. ಇದನ್ನು ಜಂಗುಲಿ ಪೀಠ ಎಂದು ಕರೆಯುತ್ತಾರೆ. ಇದಕ್ಕೆ ಈ ಹೆಸರು ಬರಲು ಒಂದು ಕತೆ ಹೇಳುತ್ತಾರೆ. ಚಾಲುಕ್ಯ ಚಕ್ರವರ್ತಿ ಗಳಲ್ಲಿ ತುಂಬ ಪ್ರಖ್ಯಾತನಾದ ವಿಕ್ರಮನ ಕಾಲದಲ್ಲಿ ನಡೆದ ಘಟನೆ ಯಿದು ಎಂದು ಹೇಳುತ್ತಾರೆ. ಕೇದಾರೇಶ್ವರ ಮಠದ ಆಚಾರ್ಯ ರಾಗಿದ್ದ ಒಬ್ಬರಿಗೆ(ಅವರು ಯಾರು ಎಂದು ನಿಶ್ಚಯವಾಗಿ ಹೇಳಲು ಆಗುವುದಿಲ್ಲ) ಸಂಬಂಧಿಸಿದ್ದು ಈ ಪ್ರಸಂಗ. ಆಗ ಜಂಗುಲಿ ಎಂಬ ಒಬ್ಬ ರಾಜವೇಶ್ಯೆಯನ್ನು ಕೇದಾರೇಶ್ವರ ದೇವಾಲಯದಲ್ಲಿ ನೃತ್ಯ ಸೇವೆ ಸಲ್ಲಿಸಲು ನಿಯಮಿಸಿದ್ದರು. ಆಕೆ ರಾಜವೇಶ್ಯೆಯಾದರೂ ಅತ್ಯಂತ ಸಂಭಾವಿತಳಾದಂಥ ಹೆಂಗಸು ; ಗುರುಹಿರಿಯರಲ್ಲಿಯೂ ದೇವರಲ್ಲಿಯೂ ತುಂಬ ಗೌರವ ಭಕ್ತಿಗಳನ್ನು ಹೊಂದಿದ್ದವಳು. ಒಂದು ಬಾರಿ ಈಕೆ ಮಠದ ಆಚಾರ್ಯರನ್ನು ತಮ್ಮ ಮನೆಗೆ ಆಹ್ವಾನಿಸುತ್ತಾಳೆ. ಈಕೆಯ ಗುಣಶೀಲಗಳನ್ನು ತಿಳಿದ ಸ್ಥಾನಪತಿ ಗಳು, ಆಕೆಯ ಆಹ್ವಾನದಲ್ಲಿ ಯಾವ ತಪ್ಪು ಭಾವನೆಯನ್ನೂ ಕಾಣುವುದಿಲ್ಲ. ಆದ್ದರಿಂದ ಅವಳ ಆಹ್ವಾನವನ್ನು ಒಪ್ಪಿಕೊಳ್ಳು ತ್ತಾರೆ ; ಆಕೆಯ ಮನೆಗೆ ಹೋಗಿಬರುತ್ತಾರೆ. ಈ ಪ್ರಸಂಗ ನಡೆಯುವ ಕಾಲದಲ್ಲಿ ಬಳ್ಳಿಗಾವಿಯ ಪಟ್ಟಣಸ್ವಾಮಿಯಾಗಿದ್ದವನು (ಎಂದರೆ ಈಗಿನ ನಗರಸಭೆಯ ಅಧ್ಯಕ್ಷನಂತೆ) ಮಾಚಿಸೆಟ್ಟಿ ಎಂಬು ವನು. ರಾಜವೇಶ್ಯೆಯ ಮನೆಗೆ ನೈಷ್ಠಿಕ ಬ್ರಹ್ಮಚಾರಿಗಳಾದ

ಆಚಾರ್ಯರು ಹೋಗಿಬಂದರೆಂದು ದೊರೆಯ ಬಳಿಗೆ ಹೋಗಿ ದೂರು ಹೇಳುತ್ತಾನೆ. ರಾಜನು ಈ ವಿಷಯವನ್ನು ಚರ್ಚಿಸಿ ತೀರ್ಮಾನವೀಯಲು ಒಂದು ನ್ಯಾಯಸಭೆಯನ್ನು ಸೇರಿಸುತ್ತಾನೆ. ಗುರುಗಳನ್ನು ಕರೆಸಿ ಅವರ ಮೇಲೆ ಹೊರಿಸಿರುವ ಆರೋಪ ನಿಜ ವಾದುದೇ ಎಂದು ದೊರೆ ವಿಚಾರಿಸುತ್ತಾನೆ. ಚಂಗುಲಿಯ ಮನೆಗೆ ಆಕೆಯ ಆಹ್ವಾನದ ಮೇಲೆ ಹೋಗಿದ್ದುದಾಗಿ ಗುರುಗಳು ಒಪ್ಪಿ ಕೊಳ್ಳುತ್ತಾರೆ. ಆಗ ರಾಜನು ತನ್ನ ತೀರ್ಮಾನವನ್ನು ಕೊಡುತ್ತಾನೆ. ಗುರುಗಳು-ಚಂಗುಲಿ ಇವರ ನಡುವೆ ಯಾವ ಕೆಟ್ಟ ಸಂಬಂಧ ಇಲ್ಲದಿರಬಹುದಾದರೂ, ವಿದ್ಯಾರ್ಥಿಗಳಿಗೆ ಮಾದರಿಯಾಗಿರ ಬೇಕಾದ ಆಚಾರ್ಯರು ವೇಶ್ಯೆಯ ಮನೆಗೆ ಹೋಗುವುದು ತಪ್ಪು ಎಂದು ಅಭಿಪ್ರಾಯಪಡುತ್ತಾನೆ. ಇಂಥ ಘೋರ ಅಪರಾಧವನ್ನು ಮಾಡಿದ ಆಚಾರ್ಯರಿಗೆ ಆನೆಯ ಕಾಲಿನಿಂದ ತುಳಿಸಿ ಕೊಲ್ಲಿಸ ಬೇಕೆಂಬ ಶಿಕ್ಷೆಯನ್ನು ವಿಧಿಸುತ್ತಾನೆ ; ಆ ಶಿಕ್ಷೆಯನ್ನು ಕೊಡುವು ದಕ್ಕೆ ಒಂದು ದಿನವನ್ನು ನಿಗದಿ ಮಾಡುತ್ತಾನೆ. ಗುರುಗಳು ಈ ಶಿಕ್ಷೆಯನ್ನು ಅನುಭವಿಸಲು ಒಪ್ಪಿಕೊಳ್ಳುತ್ತಾರೆ.


ಈ ವಿಷಯ ಚಂಗುಲಿಗೆ ತಿಳಿಯುತ್ತದೆ. ತನ್ನ ಕಾರಣಕ್ಕಾಗಿ ಶಿಕ್ಷೆ ಅನುಭವಿಸಬೇಕಾದ ಗುರುಗಳ ಬಗ್ಗೆ ಆಕೆಗೆ ತುಂಬ ದುಃಖ ವಾಗುತ್ತದೆ. ತಾನು ಯಾವ ಕೆಟ್ಟ ಉದ್ದೇಶದಿಂದಲೂ ಆಚಾರ್ಯ ರನ್ನು ತನ್ನ ಮನೆಗೆ ಕರೆದಿರಲಿಲ್ಲ ; ಅವರ ಬಗ್ಗೆ ಭಕ್ತಿಯಿದ್ದುದ ರಿಂದ ಅವರ ಪಾದಪೂಜೆಯನ್ನು ಮಾಡಲು ಆಹ್ವಾನಿಸಿದ್ದಳು, ಅಷ್ಟೆ. ತಕ್ಷಣ ಆಕೆ ಒಂದು ನಿರ್ಧಾರಕ್ಕೆ ಬರುತ್ತಾಳೆ. ತನಗಾಗಲೀ ಗುರುಗಳಿಗಾಗಲೀ ಕೆಟ್ಟ ಉದ್ದೇಶವಿಲ್ಲದಿದ್ದರೆ ಆಚಾರ್ಯರನ್ನು ನಿರಪರಾಧಿಗಳೆಂದು ತೋರಿಸಿಕೊಡಬೇಕೆಂದು ಬೇಡಿ ಕೇದಾರೇಶ್ವರ ಗುಡಿಯಲ್ಲಿ ಮೂರು ದಿನಗಳ ಕಾಲ ಹಗಲೂ ರಾತ್ರಿ ನೃತ್ಯಸೇವೆ ಮಾಡುತ್ತಾಳೆ.

ಗುರುಗಳಿಗೆ ಶಿಕ್ಷೆ ವಿಧಿಸಬೇಕಾದ ದಿನ ಬರುತ್ತದೆ. ರಾಜ ಹೇಳಿದ್ದಂತೆ ಆಚಾರ್ಯರನ್ನು ತುಳಿಯಲೆಂದು ಒಂದು ಮದ್ದಾನೆಯನ್ನು ಬಿಡುತ್ತಾರೆ. ಆ ಆನೆಯು ಕೇದಾರೇಶ್ವರ ದೇವಸ್ಥಾನವನ್ನು ಮೂರು ಬಾರಿ ಪ್ರದಕ್ಷಿಣೆ ಮಾಡುತ್ತದೆ ; ಅನಂತರ ಗುರುಗಳ ಮುಂದೆ ನಮಸ್ಕಾರ ಮಾಡುವ ರೀತಿಯಲ್ಲಿ ಕಾಲೂರಿ ಗೌರವ ಸೂಚಿಸಿ, ಅವರನ್ನು ಏನೂ ಮಾಡದೆ ಹೊರಟುಹೋಗುತ್ತದೆ. ಚಂಗುಲಿ ಬೇಡಿಕೊಂಡಿದ್ದಂತೆ ಆಚಾರ್ಯರು ನಿರಪರಾಧಿಗಳೆಂದು ಗೊತ್ತಾಯಿತು. ಆದರೆ ಈ ಘಟನೆಯು ಆಚಾರ್ಯರ ಮನಸ್ಸಿಗೆ ತುಂಬ ನೋವುಂಟುಮಾಡುತ್ತದೆ ; ತಾನು ತುಂಬ ದೊಡ್ಡ ಆರೋಪಕ್ಕೆ ಗುರಿಯಾದೆನಲ್ಲ ಎಂದು ಬೇಸರವಾಗುತ್ತದೆ. ಮಠದ ಆಚಾರ್ಯ ಪದವಿಯನ್ನು ತಮ್ಮ ಶಿಷ್ಯನಿಗೆ ವಹಿಸಿ ತಾವು ತಪಸ್ಸಿಗಾಗಿ ಹೊರಟು ಹೋಗುತ್ತಾರೆ. ಕೇದಾರೇಶ್ವರ ದೇವಾಲಯದ ಬಲಭಾಗಕ್ಕಿರುವ ಪೀಠದ ಮೇಲೆ ಕುಳಿತು ರಾಜನು ಸಭೆ ನಡೆಸಿ ತೀರ್ಮಾನವನ್ನು ಕೈಗೊಂಡದ್ದರಿಂದ, ಈ ಪ್ರಸಂಗವು ಚಂಗುಲಿಗೆ ಸಂಬಂಧಪಟ್ಟಿದ್ದರಿಂದ, ಇದಕ್ಕೆ 'ಚ ಂ ಗು ಲಿ ಪೀ ಠ' ವೆಂದು ಹೆಸರಾಯಿತು.

ಕೇದಾರೇಶ್ವರ ಗುಡಿಯು ಪ್ರಾಕಾರಕ್ಕೆ ಅಂಟಿಕೊಂಡಂತೆ ಒಂದು ಸಣ್ಣ ಗುಡಿಯಿದೆ. ಇದರಲ್ಲಿರುವ ವಿಗ್ರಹ ಬೆತ್ತಲೆಯಾಗಿ ವಿಚಿತ್ರವಾದ ಭಂಗಿಯಲ್ಲಿ ಕೂತ ಹೆಣ್ಣಿನದು ; ತಲೆಯ ಸ್ಥಾನದಲ್ಲಿ ಕಮಲದ ಹೂವಿದೆ. ಇದನ್ನು ಉಡುತಡಿಯಮ್ಮ ಎಂದು ಕೆಲವರು ಕರೆಯುತ್ತಾರೆ. ಉಡುತಡಿಯವಳಾದ ಅಕ್ಕ ಮಹಾದೇವಿಯನ್ನು ಕೌಶಿಕನೆಂಬ ರಾಜನು ಬೆನ್ನಟ್ಟಿ ಬರುತ್ತಾನೆ. ಈಕೆ ಬತ್ತಲೆಯಾಗುತ್ತಾಳೆ ; ಜೈನನಾದ ಕೌಶಿಕನಿಗೆ ಈಕೆಯ ನಗ್ನತೆ ಜೈನ ಸನ್ಯಾಸಿಗಳ ನೆನಪನ್ನು ತರುತ್ತದೆ. ಅದಕ್ಕೇ ತಲೆಯ ಬದಲು ಕಮಲವಿರುವಂತೆ ಕಾಣುತ್ತದೆ ಎಂದು ಕತೆ ಹೇಳುತ್ತಾರೆ. ಆದರೆ ಈ ಕತೆ ತಲೆಬುಡ

ವಿಲ್ಲದ ಒಂದು ಕತೆ, ಅಷ್ಟೆ. ಹಾಗೆಯೇ ಈ ವಿಗ್ರಹವನ್ನು ಕಮಲ ಗಂಗವ್ವ ಎಂದೂ ಕರೆಯುತ್ತಾರೆ. ಮುಂದೆ ಕೆರೆಯಿರುವುದರಿಂದ, ಅದರಲ್ಲಿ ತಾವರೆಗಳಿರುವುದರಿಂದ ಜಲದೇವತೆಯ ವಿಗ್ರಹವಿರಬೇಕು ಎಂದೂ ಕೆಲವರು ಊಹಿಸುತ್ತಾರೆ. ಆದರೆ ಇದೂ ನಿಜವಲ್ಲ : ಇದು ಶಾಕ್ತ ಸಂಪ್ರದಾಯದ ಒಂದು ಶಿಲ್ಪ.

ಬಳ್ಳಿಗಾವಿಯ ಮತ್ತೊಂದು ಪ್ರಮುಖ ದೇವಾಲಯವೆಂದರೆ ತ್ರಿಪುರಾಂತಕೇಶ್ವರನದು. ಇದರಲ್ಲಿ ಎರಡು ಗರ್ಭಗುಡಿಗಳಿವೆ. ಉತ್ತರದಲ್ಲಿ ವಿಷ್ಣುವಿನ ಪ್ರತಿಮೆಯಿದೆ ; ಪಶ್ಚಿಮ ಗರ್ಭಗುಡಿಯಲ್ಲಿ ಶಿವಲಿಂಗವೂ ಪ್ರತಿಷ್ಠಿತವಾಗಿದೆ. ಇದರ ನಿರ್ಮಾಣವಾದದ್ದು ಕ್ರಿ. ಶ. ೧೦೭೦ ರಲ್ಲಿ. ಇದರ ಹೊರಭಾಗ ಕೇದಾರೇಶ್ವರ ಗುಡಿಯಷ್ಟು ಆಕರ್ಷಕವಾಗಿಲ್ಲ. ಆದರೆ ಈ ದೇವಾಲಯದ ತಳಪಾದಿಯ ಮೇಲೆ ಸಾಲಾಗಿ ಅನೇಕ ಪೌರಾಣಿಕ ಕತೆಗಳನ್ನು ಕೆತ್ತಿದ್ದಾರೆ. ಶ್ರೀರಾಮನು ಸಪ್ತಸಾಲದ ಮರಗಳನ್ನು ಒಂದೇ ಬಾಣದಿಂದ ಉರುಳಿಸಿ ತನ್ನ ಸಾಮರ್ಥ್ಯವನ್ನು ಸುಗ್ರೀವನಿಗೆ ಪರಿಚಯ ಮಾಡಿಕೊಡುವುದು, ಮತ್ತು ವಾಲಿ ವಧೆಯನ್ನು ಮಾಡುವ ಪ್ರಸಂಗ ಈ ಎರಡು ರಾಮಾಯಣಕ್ಕೆ ಸಂಬಂಧಿಸಿದವುಗಳು. ಕೋತಿ ಮತ್ತು ಮೊಸಳೆ, ನರಿ ಮತ್ತು ಟಗರು, ಆಮೆ ಮತ್ತು ಹಂಸ ಮುಂತಾದ ಪಂಚತಂತ್ರದ ಕತೆಗಳನ್ನೂ ಸುಂದರವಾಗಿ ಇಲ್ಲಿ ಕೆತ್ತಿದ್ದಾರೆ. ಇವುಗಳ ಮೇಲ್ಭಾಗದಲ್ಲಿ ಕೋಲಾಟವಾಡುತ್ತಿರುವ ಹುಡುಗಿಯರ ಚಿತ್ರಗಳ ಕೆತ್ತನೆಯೂ ತುಂಬ ಚೆನ್ನಾಗಿದೆ. ಒಳಗಿನ ವಿಷ್ಣುವಿನ ಮೂರ್ತಿ ಹಾಗೂ ದ್ವಾರಪಾಲಕರ ವಿಗ್ರಹಗಳೂ ತುಂಬ ಸೊಗಸಾದವು. ಈ ದೇವಸ್ಥಾನದಲ್ಲಿರುವ ಎರಡು ಜಾಲಂಧ್ರ (ಕಿಟಕಿ) ಗಳು ತುಂಬ ಸೊಗಸಾದುವು. ಅನೇಕ ವೃತ್ತಗಳಲ್ಲಿ ನೃತ್ಯದ ಅನೇಕ ಭಂಗಿಗಳನ್ನು ಕೆತ್ತಿದ್ದಾರೆ. ಇಲ್ಲಿನ ಮೇಲ್ಛಾವಣಿಯಲ್ಲಿ ಅಷ್ಟದಿಕ್ಪಾಲಕರ ಚಿತ್ರಗಳಿವೆ ; ಶಿವನು ತ್ರಿಪುರಸಂಹಾರ ಮಾಡಿದ ಕತೆಯ ಕೆತ್ತನೆಯಿದೆ ;



ರಾಮಾಯಣದ ಒಂದು ದೃಶ್ಯ : ವಾಲಿ–ಸುಗ್ರೀವರ ಕಾಳಗ

ಅಶೋಕವನದಲ್ಲಿ ಆಂಜನೇಯ ಸೀತೆಯನ್ನು ಭೇಟಿ ಮಾಡುವುದು, ರಾಮ-ರಾವಣರ ಯುದ್ಧ ಮುಂತಾದ ರಾಮಾಯಣಕ್ಕೆ ಸಂಬಂಧ ಪಟ್ಟ ಚಿತ್ರಗಳ ಕೆತ್ತನೆಗಳೂ ಇವೆ. ಕೇದಾರೇಶ್ವರ ದೇವಾಲಯ ದಲ್ಲಿರುವಂತೆ ಇಲ್ಲಿಯೂ ಸಪ್ತಮಾತೃಕೆಯರನ್ನು ಒಟ್ಟಿಗೇ ಸಾಲಾಗಿ ಕೆತ್ತಿರುವ ವಿಗ್ರಹವಿದೆ. ಬಾಗಿಲುವಾಡದ ಮೇಲೆ ಬ್ರಹ್ಮ ವಿಷ್ಣು ಮಹೇಶ್ವರರ ಚಿತ್ರಗಳಿವೆ. ತ್ರಿಪುರಾಂತಕೇಶ್ವರನ ಗರ್ಭಗುಡಿಯ ಮುಂದಿನ ನಂದಿಯ ವಿಗ್ರಹವು ಸೊಗಸಾಗಿದೆ.

ಮತ್ತೊಂದು ಪ್ರಮುಖ ದೇವಾಲಯವೆಂದರೆ ಬ್ರಹ್ಮೇಶ್ವರ ದೇವಾಲಯ. ಇಲ್ಲಿ ಹಿಂದೆ ದೇವಾಲಯವಿದ್ದ ಕುರುಹಿದ್ದರೂ ಉಳಿದಿರುವುದು ನಾಲ್ಕು ಮುಖಗಳ ವಿಗ್ರಹ ಮಾತ್ರ. ಚಾಲುಕ್ಯ ಚಕ್ರವರ್ತಿಯಾದ ಎರಡನೆಯ ಜಯಸಿಂಹನ ಕಾಲದಲ್ಲಿ, ಎಂದರೆ ಸುಮಾರು ಕ್ರಿ. ಶ. ೧೦೧೫ ರಿಂದ ೧೦೪೦ರ ನಡುವಣ ಕಾಲದಲ್ಲಿ ನಿರ್ಮಿತವಾದದ್ದು. ನಾಲ್ಕು ಮುಖಗಳು ಹಾಗೂ ಮೇಲಿನ ಲಿಂಗಾಕಾರ ಇವು ಶಿವನ ಐದು ರೂಪಗಳಾದ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಇವುಗಳ ಪ್ರತೀಕ ಗಳು. ಇದನ್ನು ಪಂಚಮುಖದ ಪರಮೇಶ್ವರನೆಂದೂ ಕರೆಯು ತ್ತಾರೆ. ಹದಿನಾಲ್ಕನೆಯ ಶತಮಾನದ ಮಲ್ಲಯ್ಯನೆಂಬ ಶಿವಶರಣ ನೊಬ್ಬನು ಮೆಕ್ಕಾಕ್ಕೆ ಹೋಗಿ ಅನೇಕ ಮಹಮ್ಮದೀಯರನ್ನು ವೀರಶೈವ ಧರ್ಮಕ್ಕೆ ಸೇರುವಂತೆ ಮಾಡುತ್ತಾನೆ ; ಅಲ್ಲಿಂದ ಬಂದು ಈ ದೇವರ ಉತ್ಸವವನ್ನು ನಡೆಸಿದ್ದರಿಂದ ಇದನ್ನು ಮಳೆಯ ಮಲ್ಲೇಶ್ವರ ದೇವಾಲಯವೆಂದು ಕರೆಯುತ್ತಾರೆ. 'ಮಳೆಯ' ಎಂಬ ವಿಶೇಷಣದ ಹಿಂದೆ ಒಂದು ನಂಬಿಕೆಯಿದೆ : ಮಳೆ ಬರದೇ ತೊಂದರೆಯಾದಾಗ ಮದಗದ ಕೆರೆಯಿಂದ ಸ್ನಾನ ಮಾಡಿ ಮಡಿಯಿಂದ ಸಾವಿರ ಕೊಡ ನೀರನ್ನು ತಂದು ಈ ದೇವರಿಗೆ ಅಭಿಷೇಕ ಮಾಡಿದರೆ ಮಳೆ ಬರುತ್ತದಂತೆ.

ಇನ್ನೊಂದು ಸೋಮೇಶ್ವರ ದೇವಾಲಯ. ಬಳ್ಳಿಗಾವಿಯ ಒಬ್ಬ ಪ್ರಸಿದ್ಧ ವರ್ತಕನಾದ ಸೋವಿಸೆಟ್ಟಿ ಎಂಬುವವನು ಈ ದೇವಾಲಯದ ನಿರ್ಮಾಣ ಮಾಡಿಸಿ, ಸೋಮೇಶ್ವರನ ವಿಗ್ರಹ ವನ್ನು (ಕ್ರಿ. ಶ.೧೦೫೪ರಲ್ಲಿ) ಪ್ರತಿಷ್ಠಾಪನೆ ಮಾಡಿದಂತೆ ತಿಳಿದು ಬರುತ್ತದೆ. ಸುಮಾರು ಒಂದು ಶತಮಾನ ಕಳೆದಮೇಲೆ ಊರಿನ ವರ್ತಕರೆಲ್ಲ ಸಭೆಸೇರಿ ಬಣಂಜು ಧರ್ಮಅಥವಾ ವರ್ತಕ ವಂಶಗಳಲ್ಲಿ ಗಂಡು ಮಕ್ಕಳಿಲ್ಲದಿರುವವರ ಆಸ್ತಿಯನ್ನು ಈ ದೇವಸ್ಥಾನದ ಜೀರ್ಣೋದ್ಧಾರಕ್ಕೆ ವಿನಿಯೋಗಿಸಬೇಕೆಂದು ತೀರ್ಮಾನಿಸುತ್ತಾರೆ. ಈ ವಿಷಯ ಒಂದು ಶಾಸನದಿಂದ ಗೊತ್ತಾಗುತ್ತದೆ. ಈ ದೇವಾ ಲಯ ಈಗ ಸಂಪೂರ್ಣವಾಗಿ ಹಾಳಾಗಿದೆ.

ಈ ದೇವಾಲಯವಿದ್ದ ಜಾಗದ ಹತ್ತಿರವೇ ವೀರಭದ್ರೇಶ್ವರ ದೇವಸ್ಥಾನವಿದೆ. ಇಲ್ಲಿನ ವೀರಭದ್ರಮೂರ್ತಿ ತುಂಬ ಚೆನ್ನಾಗಿದೆ. ಇದನ್ನು ಕುಸುಮೇಶ್ವರ ದೇವಾಲಯವೆಂದು ಕರೆಯುತ್ತಾರೆ. ಒಳಗೆ ಶಿವ-ಪಾರ್ವತಿ, ಗಣಪತಿ, ಷಣ್ಮುಖರ ಪ್ರತಿಮೆಗಳಿವೆ. ಷಣ್ಮುಖನ ಪ್ರತಿಮೆಯ ಕೆತ್ತನೆ ಬೆರಗುಗೊಳಿಸುವಷ್ಟು ಸುಂದರ ವಾಗಿದೆ.

ಈಗ ಜಿಡ್ಡಿಕೆರೆಯೆಂದು ಕರೆಯುವ ಕೆರೆಯ ಸುತ್ತಲೂ ದಡದ ಮೇಲೆ ಅನೇಕ ದೇವಸ್ಥಾನಗಳಿವೆ. ಅವುಗಳಲ್ಲಿ ಅತ್ಯಂತ ಪ್ರಮುಖವಾದುದು ಪಂಚಲಿಂಗೇಶ್ವರ ದೇವಾಲಯ. ಇಲ್ಲಿ ಪಂಚ ಪಾಂಡವರಾದ ಧರ್ಮರಾಯ, ಭೀಮ, ಅರ್ಜುನ, ನಕುಲ ಮತ್ತು ಸಹದೇವರು ಒಂದೊಂದು ಲಿಂಗವನ್ನು ಎಂದರೆ ಒಟ್ಟು ಐದು ಲಿಂಗಗಳನ್ನು ಪ್ರತಿಷ್ಠೆ ಮಾಡಿಸಿದ್ದರಿಂದ ಇದಕ್ಕೆ ಪಂಚಲಿಂಗೇಶ್ವರ ದೇವಾಲಯವೆಂದು ಹೆಸರಾಯಿತೆಂದು ಹೇಳುತ್ತಾರೆ; ಈ ವಿಷಯ ಶಾಸನಗಳಲ್ಲಿಯೂ ಬರುತ್ತದೆ. ಈ ದೇವಸ್ಥಾನವನ್ನು ಹಿನ್ನೆಲೆಯಾಗುಳ್ಳ ಒಂದು ಕತೆಯಿದೆ. ಪಟ್ಟದಕಲ್ಲಿನ ರಾಜಕುಮಾರ

ನಾದ ಮಹಾಧೀಶ ಎನ್ನುವವನು ಲಿಂಗಪ್ರಸಾದವಿಲ್ಲದೆ ಊಟ ಮಾಡುವುದಿಲ್ಲವೆಂದು ವ್ರತವನ್ನು ತೊಟ್ಟಿರುತ್ತಾನೆ. ಒಂದು ಬಾರಿ ಕಾಡಿಗೆ ಬೇಟೆಗಾಗಿ ಹೋಗಿದ್ದಾಗ ದಾರಿ ತಪ್ಪಿ ಪರಿವಾರದಿಂದ ದೂರವಾಗುತ್ತಾನೆ. ಲಿಂಗದರ್ಶನವಿಲ್ಲದೆ ಉಪವಾಸದಿಂದ ಬಳಲಿ ಸುತ್ತುತ್ತಿರುತ್ತಾನೆ. ಆಗ ಶಿವನ ವಾಹನವಾದ ನಂದಿಗೆ ಇವನ ಮೇಲೆ ಕರುಣೆಯುಂಟಾಗುತ್ತದೆ. ಒಂದು ಎತ್ತಿನ ರೂಪದಲ್ಲಿ ಬಂದು ತನ್ನ ಬಾಯಲ್ಲಿದ್ದ ಇಷ್ಟಲಿಂಗವನ್ನು ರಾಜಕುಮಾರನಿಗೆ ನೀಡಿ ಮಾಯವಾಗುತ್ತದೆ. ಆಗಿನಿಂದ ಆ ಲಿಂಗವನ್ನು ಇವನು ಕಣ್ಣುರೆಪ್ಪೆ ಮಿಟುಕಿಸದೆ ನೋಡುತ್ತಿದ್ದುದರಿಂದ ಅವನಿಗೆ ಅನಿಮಿಷಯ್ಯ ಎಂದು ಹೆಸರಾಗುತ್ತದೆ. ಹೀಗೆ ಅನಿಮಿಷಯ್ಯನಿಗೆ ಇಷ್ಟಲಿಂಗವನ್ನು ಕೊಟ್ಟ ನಂದಿ ಶಿವನಿರುವಲ್ಲಿಗೆ ಬರುತ್ತಾನೆ. ಆದರೆ ಲಿಂಗವಿಲ್ಲದ ಭವಿಯಾದ (ಲಿಂಗಧಾರಿಯಲ್ಲದ) ನಂದಿಯನ್ನು ಒಳಗೆ ಬಿಡಲು ದ್ವಾರಪಾಲಕರು ನಿರಾಕರಿಸುತ್ತಾರೆ. ಆಗ ನಂದಿಯ ದೇಹದ ಬೆವರಿನ ರಂಧ್ರಗಳಿಂದೆಲ್ಲ ಅಸಂಖ್ಯಾತವಾದ ಲಿಂಗಗಳು ಹೊರ ಹೊಮ್ಮುತ್ತವೆ. ಈ ಪವಾಡವನ್ನು ಕಂಡು ಹೆದರಿದ ದ್ವಾರ ಪಾಲಕರು ಶಿವನ ಹತ್ತಿರ ಹೋಗಿ ಈ ವಿಷಯವನ್ನು ತಿಳಿಸುತ್ತಾರೆ. ಸಾಕ್ಷಾತ್ತಾಗಿ ಶಿವ–ಪಾರ್ವತಿಯರೇ ನಂದಿಯನ್ನು ಸ್ವಾಗತಿಸಲು ಬರುತ್ತಾರೆ. ತನ್ನನ್ನು ತಡೆದ ದ್ವಾರಪಾಲಕರು ಭವಿಗಳಾದ ಬಿಜ್ಜಳ–ಕರ್ಣದೇವರಾಗಿ ಹುಟ್ಟುವಂತೆ ನಂದಿ ಶಾಪ ಕೊಡುತ್ತಾನೆ. ಹೀಗೆ ತನ್ನ ತಾಳ್ಮೆಯನ್ನು ಕಳೆದುಕೊಂಡ ನಂದಿಯು ಬಸವಣ್ಣ ನಾಗಿ ಹುಟ್ಟುವಂತೆ ಶಿವ ಮರುಶಾಪ ಕೊಡುತ್ತಾನೆ. ಈ ಕತೆಯನ್ನು ಕೆಲವು ವೀರಶೈವ ಪುರಾಣಗಳು ಕೈಲಾಸದಲ್ಲಿ ನಡೆಯಿತೆಂದು ಹೇಳುತ್ತವೆ. ಆದರೆ ಬಳ್ಳಿಗಾವೆಯ ಜನರು ಇದು ಪಂಚ ಲಿಂಗೇಶ್ವರ ದೇವಸ್ಥಾನದಲ್ಲಿ ನಡೆಯಿತೆಂದು ಹೇಳುತ್ತಾರೆ.

ಈ ಪಂಚಲಿಂಗೇಶ್ವರ ದೇವಸ್ಥಾನದ ದ್ವಾರಪಾಲಕರ

ವಿಗ್ರಹಗಳು ಈಗ ಬೆಂಗಳೂರಿನ ಮ್ಯೂಸಿಯಂನಲ್ಲಿವೆ. ಹಿಂದೆ ಇಲ್ಲಿದ್ದ ವೈಕುಂಠನಾರಾಯಣ, ಉಮಾಮಹೇಶ್ವರ, ಮಹಿಷಾಸುರ ಮರ್ದಿನಿ ಮುಂತಾದ ಕೆಲವು ವಿಗ್ರಹಗಳು ಈಗ ಕೇದಾರೇಶ್ವರ ದೇವಾಲಯದ ಪ್ರಾಕಾರದಲ್ಲಿವೆ. ಹಿಂದೆ ಹೇಳಿದ ವೀರಭದ್ರೇಶ್ವರ ದೇವಾಲಯದಲ್ಲಿರುವ ಶಿವ–ಪಾರ್ವತಿಯರ ವಿಗ್ರಹವೂ ಇಲ್ಲಿನದೇ.

ಈ ದೇವಸ್ಥಾನ ಈಗ ತುಂಬ ಹಾಳಾದ ಸ್ಥಿತಿಯಲ್ಲಿದೆ. ಇದರ ಬಲ ಪಕ್ಕಕ್ಕೆ ಒಂದು ವಿಶಾಲವಾದ ಹಾಳು ಮಂಟಪವಿದೆ. ಇದು ದೇವಸ್ಥಾನವಲ್ಲ. ಹಿಂದೆ ಒಂದು ವಿದ್ಯಾಪೀಠವು ಈ ದೇವಾಲಯದ ಆಡಳಿತದಿಂದ ನಡೆಸಲ್ಪಡುತ್ತಿತ್ತು. ಆ ಕಾಲದಲ್ಲಿ ವಿದ್ಯಾಪ್ರಸಾರಕ್ಕಾಗಿ ಉಪಯೋಗಿಸುತ್ತಿದ್ದ ಸಭಾ ಭವನದಂತೆ ಇದು ಕಾಣುತ್ತದೆ.

ಪಂಚಲಿಂಗೇಶ್ವರ ದೇವಸ್ಥಾನದ ಎಡಗಡೆಗೆ ಇರುವ ದೇವಾಲಯ ಅನಂತಶಯನ ದೇವರದ್ದು. ಕ್ರಿ ಶ. ೧೦೬೦ರಲ್ಲಿ ಕಲಚುರಿ ವಂಶದ ಬಿಜ್ಜಳನ ಬಳಿ ದಂಡನಾಯಕನಾಗಿದ್ದ ಕೇಶಿಮಯ್ಯ ಎಂಬಾತನು ಈ ದೇವಸ್ಥಾನವನ್ನು ಕಟ್ಟಿಸಿದವನು. ಏಳು ಹೆಡೆಗಳ ಸರ್ಪದ ಮೇಲೆ ಮಲಗಿರುವ ವಿಷ್ಣುವಿನ ಕಾಲನ್ನು ಲಕ್ಷ್ಮಿ ಒತ್ತುತ್ತಿದ್ದಾಳೆ. ಹೊಕ್ಕುಳಲ್ಲಿನ ತಾವರೆಯಲ್ಲಿ ಬ್ರಹ್ಮ ಕುಳಿತಿದ್ದಾನೆ, ಮೇಲುಗಡೆ ಪ್ರಭಾವಳಿಯಲ್ಲಿ ವಿಷ್ಣುವಿನ ಹತ್ತು ಅವತಾರಗಳ ಚಿತ್ರಗಳು ತುಂಬ ಸುಂದರವಾಗಿ ಕೆತ್ತಲ್ಪಟ್ಟಿವೆ. ಈಗ ಈ ಗುಡಿ ಬಹಳವಾಗಿ ಹಾಳುಬಿದ್ದಿದೆ.

ಪಂಚಲಿಂಗೇಶ್ವರ ಗುಡಿಯ ಹಿಂಭಾಗದಲ್ಲಿ ನೀಲಕಂಠೇಶ್ವರ ಅಥವಾ ಶ್ರೀಕಂಠೇಶ್ವರನ ಗುಡಿಯಿದೆ. ಇದು ಕ್ರಿ. ಶ. ೧೦೩೬ರಲ್ಲಿ ನಿರ್ಮಿತವಾದ ದೇವಸ್ಥಾನವೆಂದು ಶಾಸನಗಳಿಂದ ಗೊತ್ತಾಗುತ್ತದೆ. ಇಲ್ಲಿರುವ ಲಿಂಗವನ್ನು ಹಸುರು ಕಲ್ಲಿನಿಂದ ಮಾಡಿದ್ದಾರೆ. ಈ ದೇವಸ್ಥಾದದ ಎದುರಿಗೇ ಜಿಡ್ಡಿಕೆರೆಯಿದೆ. ಕೆರೆಯಲ್ಲಿ ಯಾವುದೋ

ಒಂದು ನಿರ್ದಿಷ್ಟ ಮಟ್ಟದಲ್ಲಿ ನೀರು ತುಂಬಿರುವಾಗ, ಆ ನೀರಿನಲ್ಲಿ ಬಿದ್ದ ಸೂರ್ಯನ ಪ್ರತಿಬಿಂಬದ ಕಾಂತಿಯಿಂದಾಗಿ ಈ ಲಿಂಗವು ದಿನದ ಒಂದೊಂದು ಕಾಲದಲ್ಲಿ ಒಂದೊಂದು ಬಣ್ಣವಾಗಿ ಕಾಣುವುದೆಂದು ಹೇಳುತ್ತಾರೆ.

ಇದರ ಪಕ್ಕದಲ್ಲಿಯೇ ಯೋಗೀಶ್ವರ ದೇವಾಲಯವಿದೆ. ಇದನ್ನು ಹನ್ನೊಂದನೇ ಶತಮಾನದಲ್ಲಿದ್ದ ದೊಡ್ಡ ಅದ್ವೈತಮತ ಪ್ರಚಾರಕರಾದ ಗುಣಗಳ್ಳ ಎಂಬ ಯೋಗಿಗಳು ಸ್ಥಾಪಿಸಿದರು ; ಕ್ರಿ.ಶ. ೧೦೭೧ರಲ್ಲಿ, ಚಾಲುಕ್ಯ ಚಕ್ರವರ್ತಿ ತ್ರಿಭುವನಮಲ್ಲದೇವನ ಕಾಲದಲ್ಲಿ, ಅವನ ಸಂಧಿವಿಗ್ರಹಿಯಾದ (ಯುದ್ಧದ ವಿಚಾರದಲ್ಲಿ ಮೇಲ್ವಿಚಾರಣೆ ವಹಿಸುವ ಮಂತ್ರಿ) ಉದಯಾದಿತ್ಯನು ಈ ದೇವಸ್ಥಾನಕ್ಕೆ ದತ್ತಿಯೊಂದನ್ನು ಬಿಟ್ಟಿದ್ದಾನೆ.

ಇದೇ ಕೆರೆಯ ದಂಡೆಯ ಮತ್ತೊಂದು ಕಡೆಯಲ್ಲಿ ಒಂದು ದೇವಾಲಯವಿದೆ. ಇದನ್ನು ಕಾಳಿಕಾಂಬ ದೇವಾಲಯವೆನ್ನುತ್ತಾರೆ. ಆನೆಯ ಸೊಂಡಿಲಿರುವ ಮನುಷ್ಯನ ಆಕಾರವನ್ನು ಪಡೆದಿರುವ ವಿಗ್ರಹವೊಂದನ್ನು ಬಾಗಿಲುವಾಡದ ಮೇಲೆ ಕೆತ್ತಿದ್ದಾರೆ. ಗರ್ಭಗುಡಿಯ ಒಳಗಿರುವ ವಿಗ್ರಹವೂ ಇಂಥದೇ ; ಆದರೆ ಅದು ತುಂಬ ದೊಡ್ಡದು. ಈ ದೇವಸ್ಥಾನದ ಗೋಡೆಗೆ ಒರಗಿಸಿರುವ ಒಂದು ಶಿಲ್ಪ ಸುಂದರವಾದುದು. ಒಂದು ಹಸು ಲಿಂಗವೊಂದರ ಮೇಲೆ ತಾನೇ ತಾನಾಗಿ ಹಾಲು ಸುರಿಸುತ್ತಿರುವ ಚಿತ್ರವದು.

ಈ ಮೇಲಿನ ವರ್ಣನೆಯೆಲ್ಲವೂ ಶಿವ ಹಾಗೂ ವಿಷ್ಣುವಿನ ದೇವಸ್ಥಾನಗಳಿಗೆ ಸಂಬಂಧಪಟ್ಟದ್ದು. ಬಳ್ಳಿಗಾವೆಯು ಸರ್ವಧರ್ಮಗಳಿಗೂ ಆಶ್ರಯವಿತ್ತಿದ್ದ ಪಟ್ಟಣ. ಈ ವಿಷಯವು ಇಲ್ಲಿರುವ ನಾನಾ ಧರ್ಮಗಳಿಗೆ ಸಂಬಂಧಿಸಿದ ದೇವಸ್ಥಾನಗಳಿಂದಲೇ ವ್ಯಕ್ತವಾಗುತ್ತದೆ. ಬಳ್ಳಿಗಾವೆಯ ಒಳಗೂ ಹೊರಭಾಗದಲ್ಲೂ ಅನೇಕ ಜಿನಪ್ರತಿಮೆಗಳನ್ನು ಕಾಣುತ್ತೇವೆ. ಆ ಪ್ರತಿಮೆಗಳಿರುವ ಜಾಗ

ಗಳಲ್ಲಿ ಕೆಲವು ಕಡೆಗಳಲ್ಲಾದರೂ ಹಿಂದೆ ಜೈನ ಬಸದಿಗಳಿದ್ದಿರಬೇಕು. ಈಗ ಚೌಕಿಮಠ ಎಂದು ಕರೆಯುವ ಕಡೆ ಒಂದು ಜಿನಪ್ರತಿಮೆ ಕೈ ಕಾಲು ಮುರಿದುಕೊಂಡು ಬಿದ್ದಿದೆ. ಅದರ ಉದ್ದ ಹತ್ತು ಅಡಿ, ಅಗಲ ಸುಮಾರು ನಾಲ್ಕು ಅಡಿಗಳು. ಇದನ್ನು ಕ್ರಿ. ಶ. ೧೦೭೭ ರಲ್ಲಿ ಬಳ್ಳಿಗಾವೆಯ ಹತ್ತಿರವಿರುವ ಬಂದಳಿಕೆಯ ನಾಗಿಯಕ್ಕನ ಸಹೋದರನಾದ ಚಾವುಂಡ ದಂಡಾಧಿಪತಿಯು ನಿರ್ಮಿಸಿದನೆಂದು ಹೇಳುತ್ತಾರೆ. ಈ ಪ್ರತಿಮೆ ತುಂಬ ಸುಂದರವಾದುದು. ಮಂದ ಹಾಸ ಮತ್ತು ಗಾಂಭೀರ್ಯಗಳಿಂದ ಕೂಡಿ ಪ್ರತಿಮಾಯೋಗದಲ್ಲಿ (ಎಂದರೆ ವಿಗ್ರಹದ ಹಾಗೆ ನಿಶ್ಚಲವಾಗಿ ನಿಂತು ತಪಸ್ಸು ಮಾಡು ವುದು)ನಿಂತಿರುವ ಮೂರ್ತಿ ಶ್ರವಣಬೆಳ್ಗೊಳದ ಗೊಮ್ಮಟೇಶ್ವರನ ವಿಗ್ರಹವನ್ನು ನೆನಪಿಗೆ ತರುತ್ತದೆ. ಇಲ್ಲಿ ಹಿಂದೆ ಕಟ್ಟಡವಿದ್ದ ಕುರುಹುಗಳಿವೆ. ಇಲ್ಲಿ ಮಲ್ಲಿಕಾ ಶಾಂತಿನಾಥ ಬಸದಿಯೂ ಒಂದು ಜೈನ ವಿದ್ಯಾಲಯವೂ ಇತ್ತೆಂದು ಕೆಲವರು ಹೇಳುತ್ತಾರೆ.

ಜನರು ಈ ವಿಗ್ರಹವನ್ನು ಬೇತಾಳ ಎಂದು ಕರೆಯುತ್ತಾರೆ. ಮಕ್ಕಳಿಗೆ ಕಾಯಿಲೆಯಾಗಿದ್ದರೆ ಈ ಪ್ರತಿಮೆಗೆ ಹರಸಿಕೊಂಡು ಅದರ ಹೊಕ್ಕುಳಿನಲ್ಲಿ ತಲೆಯ ಮೇಲೆ ಎಣ್ಣೆಯನ್ನು ಹಾಕಿದರೆ ಕಾಯಿಲೆ ವಾಸಿಯಾಗುವುದೆಂಬ ನಂಬಿಕೆಯಿದೆ. ಮಕ್ಕಳು ಹಟ ಮಾಡಿ ಅಳುತ್ತಿದ್ದರೆ ಇದಕ್ಕೆ ಹೇಳಿಕೊಂಡರೆ ಅವು ಹಟ ನಿಲ್ಲಿಸುತ್ತವೆಂಬ ನಂಬಿಕೆಯೂ ಇದೆ.

ಹಿಂದೆ ಕನ್ನಡನಾಡಿನಲ್ಲಿ ಬೌದ್ಧಧರ್ಮ ಜನಪ್ರಿಯವಾಗಿತ್ತೆಂದು ಕಾಣುತ್ತದೆ. ಬಳ್ಳಿಗಾವೆಯಲ್ಲಿಯೂ ತಾರಾಭಗವತಿಯೆಂಬ ಬೌದ್ಧ ದೇವತೆಯ ವಿಗ್ರಹವೊಂದು ಸಿಕ್ಕಿದೆ. ಚಾಳುಕ್ಯ ತ್ರೈಲೋಕ್ಯಮಲ್ಲನ ಕಾಲದಲ್ಲಿ ನಾಡಪೆರ್ಗಡೆಯಾಗಿದ್ದ ಸಹವಾಸಿ ಹಂಪಜಟ್ಟಿಯ ಹೆಂಡತಿಯಾದ ನಾಗಿಯಕ್ಕ ಎಂಬುವಳು ಕ್ರಿ. ಶ. ೧೦೬೭ರಲ್ಲಿ ಈ ವಿಗ್ರಹವನ್ನು ಮಾಡಿಸಿದಳು. ಹಾಗೆಯೇ ಕ್ರಿ. ಶ.




ಗೊಮ್ಮಟೇಶ್ವರ ವಿಗ್ರಹ

೧೦೬೫ರಲ್ಲಿ, ಚಾಲುಕ್ಯ ಚಕ್ರವರ್ತಿ ಆಹವಮಲ್ಲನ ಕಾಲದಲ್ಲಿ ಬೆದರಿಗುಪ್ಪೆಯ ಭಂಡಾರಿಯೂ ಸರ್ವದಂಡನಾಯಕರ ಮುಖ್ಯನೂ ಆದ ರೂಪಭಟ್ಟಯ್ಯನೆಂಬುವನು ಜಯಂತಿಯೆಂಬ ಜಾಗದಲ್ಲಿ ಬುದ್ಧವಿಹಾರವೊಂದನ್ನು ನಿರ್ಮಿಸಿದನೆಂದು ಶಾಸನವೊಂದರಲ್ಲಿ ಹೇಳಿದೆ. ಆದರೆ ಈ ವಿಹಾರವಿದ್ದ ಸ್ಥಳವಾವುದೆಂದು ಹೇಳಲು ನಮಗೆ ಈಗ ಯಾವ ಕುರುಹುಗಳೂ ಇಲ್ಲ.

ಜಿಡ್ಡಿಕೆರೆಗೆ ಸ್ವಲ್ಪ ದೂರದಲ್ಲಿ, ಹತ್ತು ಅಡಿ ಎತ್ತರದ ವೇದಿಕೆಯ ಮೇಲೆ ಸುಮಾರು ಮೂವತ್ತು–ಮೂವತ್ತೆರಡು ಅಡಿ ಎತ್ತರದ ಒಂದು ಸ್ತಂಭವಿದೆ. ಇದು ಒಂದು ವಿಜಯಸ್ತಂಭ ; ಭೇರುಂಡೇಶ್ವರ ಸ್ತಂಭವೆಂದು ಇದಕ್ಕೆ ಹೆಸರು. ಇದನ್ನು ಚಾಲುಕ್ಯ ಚಕ್ರವರ್ತಿಯಾದ ತ್ರೈಲೋಕ್ಯಮಲ್ಲನ ಕಾಲದಲ್ಲಿ ಚಾವುಂಡರಾಯರಸ ಎನ್ನುವವನು ಸುಮಾರು ಕ್ರಿ.ಶ. ೧೦೫೦ರಲ್ಲಿ ತನ್ನ ವಿಜಯದ ಸ್ಮಾರಕವಾಗಿ ಸ್ಥಾಪಿಸಿದ. ಜಗುಲಿಯ ಮೇಲೆ ಒಂದು ಸುಂದರವಾದ ಗಂಡಭೇರುಂಡದ ವಿಗ್ರಹವಿದೆ. ನಾಲ್ಕು ಅಡಿ ಎತ್ತರದ ಈ ವಿಗ್ರಹವು ಒಂದೇ ಮನುಷ್ಯದೇಹದಲ್ಲಿ ಹೊರಟ ಎರಡು ಗಿಡಗದ ತಲೆಗಳನ್ನು ಹೊಂದಿದೆ. ಈ ಸ್ತಂಬವನ್ನು ಮೈಸೂರಿನ ಮಹಾರಾಜರಾಗಿದ್ದ ನಾಲ್ವಡಿಕೃಷ್ಣರಾಜ ಒಡೆಯರು ಜೀರ್ಣೋದ್ಧಾರ ಮಾಡಿಸಿದರು. ಈ ಗಂಡಭೇರುಂಡ ವಿಗ್ರಹವು ಮೊದಲಿನದಲ್ಲ ; ತಮ್ಮ ಲಾಂಛನವಾದ ಇದನ್ನು ಮೈಸೂರಿನ ಶಿಲ್ಪಿಗಳೊಬ್ಬರಿಂದ ಮಾಡಿಸಿ ಇಲ್ಲಿ ಮಹಾರಾಜರು ಸ್ಥಾಪಿಸಿದರು. ಇವುಗಳಲ್ಲದೆ ಬಳ್ಳಿಗಾವೆಯಲ್ಲಿ ಆರು ವೀರಶೈವ ಮಠಗಳಿದ್ದವು. ಅವುಗಳೆಂದರೆ ಹೊಸಮಠ, ಆರಿದ್ರೇಮಠ, ವಿರಕ್ತಮಠ, ಕಲ್ಲುಮಠ, ಕಾಶೀಮಠ ಮತ್ತು ಸಮಯಾಚಾರಮಠ.

ಬಳ್ಳಿಗಾವೆಯು ಎಷ್ಟು ದೊಡ್ಡ ಧಾರ್ಮಿಕ ಕೇಂದ್ರವಾಗಿದ್ದಿತೋ ಅಷ್ಟೇ ದೊಡ್ಡ ವಿದ್ಯಾಭ್ಯಾಸದ ಕೇಂದ್ರವಾಗಿಯೂ



ವಿಜಯಸ್ತಂಭ

ಇತ್ತು. ಇಲ್ಲಿ ಮೂರು ಪುರಗಳೂ ಐದು ಮಠಗಳೂ ಏಳು ಬ್ರಹ್ಮ ಪುರಿಗಳೂ ಅನೇಕ ಅಗ್ರಹಾರಗಳೂ ಇದ್ದುವು. ಕೆಲವು ಜೈನ ಬಸದಿಗಳೂ ಬೌದ್ಧ ವಿಹಾರಗಳು ಕೂಡ ವಿದ್ಯಾಕೇಂದ್ರಗಳಾಗಿದ್ದವು. ಹಿಂದಿನ ವಿದ್ಯಾಭ್ಯಾಸದ ಕೇಂದ್ರಗಳನ್ನು ಘಟಿಕಾಸ್ಥಾನ, ಅಗ್ರಹಾರ, ಬ್ರಹ್ಮಪುರಿ ಎಂಬ ಹೆಸರುಗಳಿಂದ ಕರೆಯುತ್ತಿದ್ದರು. ಘಟಿಕಾಸ್ಥಾನ ಗಳಲ್ಲಿ ಮುಖ್ಯವಾಗಿ ಮತ ಧರ್ಮಗಳಿಗೆ ಸಂಬಂಧಪಟ್ಟಂತಹ ವಿದ್ಯೆಯನ್ನು ಹೇಳಿಕೊಡುತ್ತಿದ್ದರು. ಅಗ್ರಹಾರಗಳಲ್ಲಿ ಹೆಚ್ಚು ಜನ ಬ್ರಾಹ್ಮಣರುಗಳು ಇರುತ್ತಿದ್ದರೂ, ಇಲ್ಲಿ ಇತರರಿಗೂ ಅವಕಾಶ ವಿರುತ್ತಿತ್ತು. ಸಾಮಾನ್ಯವಾಗಿ ವಿದ್ಯಾವಂತರಾದ ಕೆಲವು ಬ್ರಾಹ್ಮಣ ಕುಟುಂಬಗಳಿಗೆ ಒಂದು ಕಡೆ ಮನೆಗಳನ್ನು ಕಟ್ಟಿಸಿಕೊಟ್ಟು ಅವರ ಜೀವನಕ್ಕೆ ದತ್ತಿಯನ್ನು ಬಿಡುತ್ತಿದ್ದರು. ಆ ಊರಿನ ಆದಾಯವೆಲ್ಲ ಬ್ರಾಹ್ಮಣರಿಗೇ ಸೇರುತ್ತಿತ್ತು. ಹೀಗೆ ಅವರು ಹೊಟ್ಟೆಪಾಡಿನ ಬಗ್ಗೆ ಹೆಚ್ಚು ಕಷ್ಟಪಡದೆ ತಮ್ಮ ವಿದ್ಯೆಯ ಬಗ್ಗೆ ಯೋಚಿಸಲು ಅವಕಾಶವಿರುತ್ತಿತ್ತು. ತಾವು ಹೆಚ್ಚು ಹೆಚ್ಚು ಜ್ಞಾನವನ್ನು ಪಡೆಯುವುದು, ಶಿಷ್ಯರಿಗೆ ವಿದ್ಯೆಯನ್ನು ದಾನಮಾಡುವುದು–ಇವೇ ಇವರ ಮುಖ್ಯವಾದ ಕರ್ತವ್ಯಗಳು. ಬ್ರಹ್ಮಪುರಿಗಳೆಂಬುವು ದೊಡ್ಡ ದೊಡ್ಡ ನಗರ ಅಥವಾ ಪಟ್ಟಣಗಳಲ್ಲಿ ಬ್ರಾಹ್ಮಣರು ವಾಸಿಸುತ್ತಿದ್ದ ವಿಭಾಗಗಳು. ಇವು ಕೂಡ ವಿದ್ಯೆಯ ಕೇಂದ್ರ ಗಳಾಗಿದ್ದವು. ಇಷ್ಟೇ ಅಲ್ಲದೆ ಹಲವಾರು ದೇವಸ್ಥಾನಗಳಲ್ಲಿಯೂ ವಿದ್ಯೆಯನ್ನು ಹೇಳಿಕೊಡುವ ವ್ಯವಸ್ಥೆಯಿತ್ತು. ಇವುಗಳನ್ನು ಮಠ ಗಳೆಂದು ಕರೆಯುತ್ತಿದ್ದರು. ಈಗಲೂ ಕೂಡ ಶೃಂಗೇರಿ, ಉಡುಪಿ, ಸಿದ್ಧಗಂಗಾ ಮುಂತಾದ ಕ್ಷೇತ್ರಗಳಲ್ಲಿ ಸಂಸ್ಕೃತ ಪಾಠಶಾಲೆಗಳನ್ನು ದೇವಸ್ಥಾನದವರು ನಡೆಸುವುದನ್ನು ನೀವು ಕಾಣಬಹುದು. ಹಳ್ಳಿ ಗಳಲ್ಲಿ ಈಗಲೂ ಪಾಠಶಾಲೆಗಳನ್ನು ಮಠಗಳೆಂದೇ ಕರೆಯುತ್ತಾರೆ.

ವಿದ್ಯಾರ್ಥಿಗಳು ವಿದ್ಯೆಯನ್ನು ಕಲಿಯುವ ಆಸೆಯಿಂದ



ಗಂಡಭೇರುಂಡ ವಿಗ್ರಹ

ದೂರ ದೂರದ ಸ್ಥಳಗಳಿಂದ ಬರುತ್ತಿದ್ದರು. ಅಂತಹ ಮಠಗಳಲ್ಲಿದ್ದ ಗುರುಗಳ ಕೀರ್ತಿ ಹೆಚ್ಚಿದಂತೆಲ್ಲ ಆ ಮಠಗಳಿಗೆ ಬರುವ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚು. ಎಲ್ಲಿ ತುಂಬು ದೊಡ್ಡ ವಿದ್ವಾಂಸರು ಆಚಾರ್ಯರಾಗಿರುತ್ತಿದ್ದರೋ ಅಂತಹ ವಿದ್ಯಾ ಕೇಂದ್ರಗಳ ಕೀರ್ತಿ ಎಲ್ಲ ಕಡೆಯೂ ಹರಡುತ್ತಿತ್ತು; ಇಂತಹ ಕಡೆಗಳಲ್ಲಿ ವಿದ್ಯೆ ಕಲಿಯಬೇಕೆಂದು ಬೇರೆಯ ದೇಶಗಳಿಂದಲೂ ವಿದ್ಯಾರ್ಥಿಗಳು ಬರುತ್ತಿದ್ದರು. ಅಂತಹ ಮಠಗಳಿಗೆ ಜನರೂ ರಾಜನೂ ಸಹಜವಾಗಿಯೇ ಹೆಚ್ಚು ಹೆಚ್ಚು ಸಹಾಯವನ್ನು ಮಾಡುತ್ತಿದ್ದರು.

ಈಗಿನ ಶಾಲೆ ಕಾಲೇಜುಗಳಲ್ಲಿ ಹೇಗೆ ಹಲವಾರು ಶಾಸ್ತ್ರಗಳನ್ನು ಕಲಿಸುವ ಏರ್ಪಾಡಿದೆಯೋ ಆಗ್ಗೆ ಸಹ ಹಲವಾರು ವಿಷಯಗಳನ್ನು ಹೇಳಿಕೊಡುವ ಅನುಕೂಲತೆಯಿರುತ್ತಿತ್ತು. ಬಹು ಹಿಂದೆ ವಿದ್ಯಾಕೇಂದ್ರಗಳಲ್ಲಿ ಕಲಿಸಿಕೊಡುತ್ತಿದ್ದ ವಿಷಯಗಳು ಹತ್ತು. ಅವುಗಳು ಯಾವುವೆಂದರೆ, ಋಗ್, ಯಜುಸ್, ಸಾಮ ಮತ್ತು ಅಥರ್ವಣ ಎಂಬ ನಾಲ್ಕು ವೇದಗಳು; ಮತ್ತು ಅವುಗಳಿಗೆ ಸಂಬಂಧಿಸಿದ ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ ಮತ್ತು ಕಲ್ಪಗಳೆಂಬ ಆರು ವೇದಾಂಗಗಳು. ಜ್ಞಾನದ ಶಾಖೆಗಳು ಬೆಳೆದಂತೆಲ್ಲ ಹೆಚ್ಚು ಹೆಚ್ಚು ಸಂಖ್ಯೆಯ ಶಾಸ್ತ್ರಗಳನ್ನು ಆಗಿನ ಕಾಲದ ಪಾಠಶಾಲೆಗಳಲ್ಲಿ ಹೇಳಿಕೊಡುತ್ತಿದ್ದರು. ಹಾಗಾಗಿ, ಮುಂದೆ ವಿಷಯಗಳ ಸಂಖ್ಯೆ ಹದಿನೆಂಟಾಯಿತು. ಪುರಾಣಗಳು, ಧರ್ಮಶಾಸ್ತ್ರ ಇವುಗಳೂ, ಉಪವೇದಗಳೆಂದು ಹೆಸರಾಗಿದ್ದ ಆಯುರ್ವೇದ, ಧನುರ್ವೇದ, ಗಾಂಧರ್ವವೇದ(ಸಂಗಿತ), ಮತ್ತು ಸ್ಥಾಪತ್ಯೋಪವೇದ (ತಾಂತ್ರಿಕ ವಿಷಯಗಳು)–ಇವುಗಳು. ಇವುಗಳಲ್ಲದೆ ಕಾವ್ಯ-ನಾಟಕ ಮುಂತಾದವುಗಳನ್ನೂ ಹೇಳಿಕೊಡುತ್ತಿದ್ದರು. ಇವೆಲ್ಲ ಸಾಮಾನ್ಯವಾಗಿ ಸಂಸ್ಕೃತಭಾಷೆಯಲ್ಲಿ

ನಡೆಯುತ್ತಿತ್ತು. ಆದರೆ ಮುಂದೆ ಮುಂದೆ ಕನ್ನಡ ಭಾಷೆಯು ವಿದ್ಯಾಭ್ಯಾಸಕ್ಕೂ ಹೆಚ್ಚು ಪ್ರಾಶಸ್ತ್ಯ ದೊರೆಯಿತು. ಈಗ ಹೇಳಿದುವೆಲ್ಲ ಹೆಚ್ಚಿನ ವಿದ್ಯೆಯನ್ನು ಪಡೆಯಬಹುದಾದ ಸ್ಥಳಗಳು. ಅನೇಕ ಸಂಖ್ಯೆಯಲ್ಲಿ ಪ್ರಾಥಮಿಕ ಪಾಠಶಾಲೆಗಳೂ ಇದ್ದವು.

ಈಗಿನ ಶಾಲೆಗಳಲ್ಲಿರುವ ಹಾಗೆಯೇ ಆಗಲೂ ಯಾವ ಯಾವ ಕಾರಣಕ್ಕಾಗಿ ರಜೆ ಕೊಡಬೇಕು ಎಂದು ನಿಗದಿಯಾಗಿತ್ತು. ರಜೆಯನ್ನು ಆಗ 'ಅನಧ್ಯಯನ' ಎಂದು ಕರೆಯುತ್ತಿದ್ದರು. ಈಗಿನಂತೆ ಪರೀಕ್ಷೆಗಳೂ ನಡೆಯುತ್ತಿದ್ದವು. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವಿದ್ಯಾಭ್ಯಾಸವನ್ನು ಮುಗಿಸಿದ ವಿದ್ಯಾರ್ಥಿಗಳನ್ನು 'ಸ್ನಾತಕ' ಎಂದು ಕರೆಯುತ್ತಿದ್ದರು. ದೂರದ ಊರಿನಿಂದ ಓದುವುದಕ್ಕಾಗಿ ಬರುವ ವಿದ್ಯಾರ್ಥಿಗಳಿಗೆ ಈಗ ವಿದ್ಯಾರ್ಥಿ ನಿಲಯಗಳು ಹೇಗೋ ಹಾಗೆಯೇ ಆಗಲೂ ವಿದ್ಯಾರ್ಥಿಗಳಿಗೆ ಊಟ, ಇರಲು ವಾಸಸ್ಥಳ ಇವುಗಳನ್ನು ಒದಗಿಸುತ್ತಿದ್ದರು. ಕೆಲವು ವಿದ್ಯಾಕೇಂದ್ರಗಳಲ್ಲಿಯೇ ವಿದ್ಯಾರ್ಥಿನಿಲಯಗಳಿರುತ್ತಿದ್ದವು. ಮತ್ತೆ ಕೆಲವು ಶ್ರೀಮಂತರು ವಿದ್ಯಾರ್ಥಿಗಳ ಆಹಾರ, ಬಟ್ಟೆ, ವಾಸಸ್ಥಳ ಮುಂತಾದುವುಗಳಿಗೆ ಸಹಾಯ ಮಾಡುತ್ತಿದ್ದರು.

ಬಳ್ಳಿಗಾವೆ ಉನ್ನತ ವಿದ್ಯಾಭ್ಯಾಸಕ್ಕೆ ತುಂಬ ಹೆಸರುವಾಸಿಯಾದ ಪ್ರದೇಶವಾಗಿತ್ತು. ಇಲ್ಲಿ ಮೊದಲು ಪಂಚಮಠ, ಹಿರಿಯ ಮಠ, ಪಂಚಲಿಂಗಮಠ, ಭೇರುಂಡೇಶ್ವರ ಮಠ ಮತ್ತು ತ್ರಿಪುರಾಂತಕ ಮಠಗಳೆಂಬ ಐದು ಮಠಗಳಿದ್ದುವು. ಹನ್ನೊಂದನೆಯ ಶತಮಾನದ ಕೊನೆಯಲ್ಲಿ ಕೇದಾರೇಶ್ವರ ಮಠ ಅಥವಾ ಕೋಡಿಯ ಮಠವು ಸ್ಥಾಪಿತವಾಯಿತು. ಈ ಮಠಗಳಲ್ಲಿ ತುಂಬ ದೊಡ್ಡ ವಿದ್ವಾಂಸರಾದವರು ಉಪಾಧ್ಯಾಯರಾಗಿದ್ದರು. ಈ ಎಲ್ಲ ಮಠ

ಗಳೂ ಯಾವ ಯಾವ ದೇವಸ್ಥಾನಗಳ ಆಡಳಿತಕ್ಕೆ ಸೇರಿದ್ದವು ಎಂದು ಈಗ ಹೇಳುವುದಕ್ಕೆ ಸಾಧ್ಯವಿಲ್ಲ.

ಮೇಲೆ ಹೇಳಿದ ಮಠಗಳಲ್ಲೆಲ್ಲ ತುಂಬ ಪ್ರಖ್ಯಾತವಾದುದೆಂದರೆ ಕೇದಾರೇಶ್ವರ ಮಠ. ಇದು ಕೋಡಿಯ ಮಠ ಎಂಬ ಹೆಸರನ್ನೂ ಪಡೆದಿತ್ತು. ಹಿಂದೆ ಹೇಳಿದ ಕೇದಾರೇಶ್ವರ ದೇವಸ್ಥಾನವೇ ಈ ಮಠವಿದ್ದ ಸ್ಥಳ. ತಾವರೆಗೆರೆಯ ಕೋಡಿಯ ಹತ್ತಿರವೇ ಈ ಮಠವಿದ್ದುದರಿಂದ ಇದಕ್ಕೆ ಕೋಡಿಯಮಠವೆಂಬ ಹೆಸರು ಬಂದಿರಬೇಕು. ಕೇದಾರೇಶ್ವರ ದೇವಾಲಯದ ಗೋಪುರಗಳು ಆ ಕಾಲಕ್ಕೆ ಚಿನ್ನದ ಕಳಸಗಳಿಂದ ಕೂಡಿ ತುಂಬ ಸುಂದರವಾಗಿದ್ದವು. ಚಕ್ರವರ್ತಿಯಾಗಲೀ, ಇತರ ರಾಜರುಗಳಾಗಲೀ ಯುದ್ಧಕ್ಕಾಗಿಯೋ ಅಥವಾ ಇತರ ಕಾರ್ಯಗಳಿಗಾಗಿಯೋ ಹೋಗುವಾಗ ಮಾರ್ಗಮಧ್ಯದಲ್ಲಿ ಬಳ್ಳಿಗಾವೆಯಲ್ಲಿಯೇ ಬಿಡಾರ ಮಾಡುತ್ತಿದ್ದರು. ಅವರೆಲ್ಲ ಈ ದೇವಾಲಯದಲ್ಲಿ ನಡೆಯುವ ಧಾರ್ಮಿಕ ಚಟುವಟಿಕೆಗಳನ್ನು ನೋಡುತ್ತಿದ್ದರು. ಅಲ್ಲಿ ಅನ್ನದಾನ ನಡೆಯುವ ರೀತಿ, ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲಗಳನ್ನು ಮಾಡಿಕೊಟ್ಟಿರುವ ರೀತಿ ಇವುಗಳನ್ನು ಕಣ್ಣಾರೆ ಕಂಡು ಆ ಮಠದ ಬಗ್ಗೆ ತುಂಬ ಗೌರವ ಉಂಟಾಗುತ್ತಿತ್ತು. ಮಠಕ್ಕಾಗಿ ಅವರಲ್ಲಿ ಕೆಲವರಾದರೂ ದತ್ತಿಗಳನ್ನು ಕೊಡುತ್ತಿದ್ದರು. ಅನೇಕ ರಾಜರು ಶ್ರೀಮಂತರು ಈ ಮಠಕ್ಕೆ ದತ್ತಿಗಳನ್ನು ಬಿಟ್ಟ ವಿಷಯ ಶಾಸನಗಳಲ್ಲಿ ಬರುತ್ತದೆ.

ದಕ್ಷಿಣ ಕೇದಾರವೆಂದು ಹೆಸರಾದ ಇಲ್ಲಿ ಶಿವಲಿಂಗ ಪೂಜೆಯಿಂದ ಭೂಮಿಯೇ ರೋಮಾಂಚನಗೊಂಡಂತೆ ಪೈರುಪಚ್ಚೆಗಳು ನೇರವಾಗಿ ನಿಂತಿರುತ್ತಿದ್ದವು. ಇಲ್ಲಿ ಶೈವ ಬ್ರಹ್ಮಚಾರಿಗಳು ತಮ್ಮ ಅನುಷ್ಠಾನವನ್ನು ಮಾಡುತ್ತಿದ್ದರು ; ಇದು ಋಗ್, ಯಜುರ್, ಸಾಮ ಮತ್ತು ಅಥರ್ವವೇದಗಳನ್ನೂ ಆರು ವೇದಾಂಗಗಳನ್ನೂ

ಅಭ್ಯಾಸ ಮಾಡಿಸುವ ಸ್ಥಳವಾಗಿತ್ತು ; ನ್ಯಾಯ, ವೈಶೇಷಿಕ, ಸಾಂಖ್ಯ,ಬೌದ್ಧ ಮುಂತಾದ ಆರು ದರ್ಶನಗಳನ್ನು ಕಲಿಸುವ ಸ್ಥಳ ವಿದು ; ಕೌಮಾರ, ಪಾಣಿನೀಯ, ಶಾಕಟಾಯನ, ಶಬ್ದಾನುಶಾಸನ ಮುಂತಾದ ವ್ಯಾಕರಣಗಳನ್ನು ಇಲ್ಲಿ ಕಲಿಸುತ್ತಿದ್ದರು ; ಲಕುಳ, ಪತಂಜಲಿ ಮುಂತಾದವರ ಯೋಗಶಾಸ್ತ್ರಗಳನ್ನು ಅಭ್ಯಾಸ ಮಾಡಲು ಇಲ್ಲಿ ಅವಕಾಶವಿತ್ತು ; ಹದಿನೆಂಟು ಪುರಾಣಗಳೂ, ಧರ್ಮಶಾಸ್ತ್ರಗಳೂ ಎಲ್ಲ ರೀತಿಯ ಕಾವ್ಯ ನಾಟಕ–ನಾಟಿಕಾ ಮುಂತಾದ ನಾನಾ ಜ್ಞಾನಶಾಖೆಗಳು ಇಲ್ಲಿ ಅಭ್ಯಾಸಕ್ಕಾಗಿ ಇದ್ದುವು ; ಈ ಸ್ಥಳದಲ್ಲಿ ಬಡವರಿಗೆ, ಅನಾಥರಿಗೆ, ಕುಂಟರು–ಕುರುಡರಿಗೆ, ಮೂಕರಿಗೆ, ಕತೆ ಹೇಳಿ ಜೀವಿಸುವವರಿಗೆ, ಹಾಡು ಗಾರರಿಗೆ, ಕೊಳಲು–ಮೃದಂಗಗಳ ವಾದಕರಿಗೆ, ನರ್ತಕರಿಗೆ, ಹೊಗಳುಭಟ್ಟರಿಗೆ, ಬತ್ತಲೆ ಜನರಿಗೆ, ಗಾಯಗೊಂಡ ಜನರಿಗೆ, ಕ್ಷಪಣಕರೆನಿಸಿದ್ದ ಜೈನ ಸನ್ಯಾಸಿಗಳಿಗೆ ಏಕದಂಡಿ, ತ್ರಿದಂಡಿ, ಹಂಸ ಮತ್ತು ಪರಮಹಂಸ ಎಂಬ ನಾಲ್ಕು ರೀತಿಯ ಬ್ರಾಹ್ಮಣ ಸನ್ಯಾಸಿ ಗಳಿಗೆ ಹಾಗೂ ನಾನಾ ಪ್ರದೇಶಗಳಿಂದ ಬಂದ ಭಿಕ್ಷುಕರಿಗೆ ಅನ್ನ ದಾನವು ನಡೆಯುತ್ತಿದ್ದಿತು. ಬಡವರಾದ ನಾನಾ ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆ ನಡೆಸುತ್ತಿದ್ದರು, ಶುಶ್ರೂಷೆ ಮಾಡು ತ್ತಿದ್ದರು ; ಒಟ್ಟಿನಲ್ಲಿ, ಇದು ಎಲ್ಲ ರೀತಿಯ ಜನರಿಗೂ ಅಭಯ ಕೊಡುವಂತಹ ಸ್ಥಳವಾಗಿತ್ತು.

ಈ ಮೇಲಿನ ವರ್ಣನೆ ಒಂದು ಶಾಸನದಲ್ಲಿ ಬರುತ್ತದೆ. ಈ ಶಾಸನವನ್ನು ಬರೆದ ಕವಿ ಕೋಡಿಯ ಮಠದ ಚಟುವಟಿಕೆಗಳ ಬಗ್ಗೆ ಸ್ವಲ್ಪ ಉತ್ಪ್ರೇಕ್ಷೆ ಮಾಡಿರಬಹುದು. ಆದರೆ ಅಲ್ಲಿ ನಡೆಯುತ್ತಿದ್ದ ವಿವಿಧ ರೀತಿಯ ಚಟುವಟಿಕೆಗಳನ್ನು ಈ ವರ್ಣನೆಯಿಂದ ತಿಳಿಯ ಬಹುದು. ಅಲ್ಲಿಯ ಕಾರ್ಯ–ಚಟುವಟಿಕೆಗಳನ್ನು ಐದು ಭಾಗವಾಗಿ ವಿಂಗಡಿಸಬಹುದು : (೧) ಕೇದಾರೇಶ್ವರಲಿಂಗದ ಪೂಜೆಗೆ ಅಲ್ಲಿ

ವ್ಯವಸ್ಥೆಯಿದ್ದಿತು ; (೨) ಶೈವ ಬ್ರಹ್ಮಚಾರಿಗಳಿಗೆ ವಸತಿಯನ್ನು ಒದಗಿಸಿಕೊಟ್ಟು ಅವರ ಧಾರ್ಮಿಕ ಕೆಲಸ ಕಾರ್ಯಗಳಿಗೆ ಅನುಕೂಲ ವನ್ನು ಏರ್ಪಡಿಸಿತ್ತು ; (೩) ರೋಗಿಗಳನ್ನು ಶುಶ್ರೂಷೆ ಮಾಡುವ ಒಂದು ಔಷಧಾಲಯವು ಅಲ್ಲಿತ್ತು ; (೪) ಬೇಕಾದವರಿಗೆ ಅನ್ನದಾನ ಮಾಡುವ ಏರ್ಪಾಡನ್ನು ಅಲ್ಲಿ ಮಾಡಲಾಗಿತ್ತು ; (೫) ನಾನಾ ಶಾಸ್ತ್ರಗಳಲ್ಲಿ ಸಾಹಿತ್ಯದ ನಾನಾ ಭಾಗಗಳಲ್ಲಿ ವಿದ್ಯಾಭ್ಯಾಸ ಮಾಡಿ ಸುವ ಸೌಲಭ್ಯಗಳು ಅಲ್ಲಿದ್ದವು.

ಈ ಮಠದ ಸ್ಥಾನಪತಿಗಳಾಗಿದ್ದವರು ಕ್ರಮವಾಗಿ ಕೇದಾರ ಶಕ್ತಿ, ಮೊದಲನೆಯ ಶ್ರೀಕಂಠ, ಸೋಮೇಶ್ವರ, ವಿದ್ಯಾಭರಣ, ಮೊದಲನೆಯ ವಾಮಶಕ್ತಿ, ಗೌತಮ, ಎರಡನೆಯ ವಾಮಶಕ್ತಿ, ಎರಡನೆಯ ಶ್ರೀಕಂಠ ಮತ್ತು ಮೂರನೆಯ ವಾಮಶಕ್ತಿ ಎಂಬುವ ವಿದ್ವಾಂಸ ತಪಸ್ವಿಗಳು. ಹಿಂದೆ ಹೇಳಿದ ಅನೇಕ ಶಾಸ್ತ್ರ ಸಾಹಿತ್ಯ ಗಳಲ್ಲಿ ಇವರು ತುಂಬ ಜ್ಞಾನವನ್ನು ಸಂಪಾದಿಸಿದ್ದವರು. ಇವರ ಕೀರ್ತಿಯನ್ನು ಕೇಳಿಯೇ ದೂರ ದೂರ ದೇಶಗಳಿಂದಲೂ ವಿದ್ಯಾರ್ಥಿಗಳು ಬಂದು ಇಲ್ಲಿ ಶಿಕ್ಷಣವನ್ನು ಪಡೆದು ಹೋಗು ತ್ತಿದ್ದರು. ಪರ್ವತಾವಳಿಯಲ್ಲಿ ಆವಿರ್ಭವಿಸಿದ ಮೂವರಕೋಣೆಯ ಸಂತತಿಗೆ ಸೇರಿದ ಶಕ್ತಿ ಪರಿಷೆ ಎಂಬ ಶೈವಶಾಖೆಗೆ ಸೇರಿದ ಗುರು ಗಳು ಇವರೆಲ್ಲ. ಇದು ಕಾಳಾಮುಖ ಎಂಬ ಶೈವಪಂಥಕ್ಕೆ ಸೇರಿದ ಶಾಖೆ. ಮೊದಲನೆಯ ಸ್ಥಾನಪತಿಯಾದ ಕೇದಾರೇಶ್ವರನು ಬಹುಶಃ ಶ್ರೀಶೈಲದಿಂದ ಬಂದು ಇಲ್ಲಿ ನೆಲೆಸಿ ಈ ಮಠವನ್ನು ಸ್ಥಾಪನೆ ಮಾಡಿರಬೇಕು.

ಈ ಎಲ್ಲ ಗುರುಗಳ ಪಾಂಡಿತ್ಯದ ಬಗ್ಗೆ, ತಪಸ್ಸಿನ ಶಕ್ತಿಯ ಬಗ್ಗೆ ಶಾಸನಗಳು ತುಂಬ ಹೊಗಳುತ್ತವೆ. ಇವರಲ್ಲೆಲ್ಲ ಎರಡನೆಯ ವಾಮಶಕ್ತಿ ಎಂಬುವವನು ತುಂಬ ಜ್ಞಾನಿಯಾಗಿ ಅತ್ಯಂತ ಪ್ರಸಿದ್ಧ ನಾದ ವ್ಯಕ್ತಿಯಾಗಿದ್ದ. ಇವನು ತಪಸ್ವಿಗಳ ಎಲ್ಲ ಗುಣಗಳನ್ನೂ

ಪಡೆದು ಆ ಮಠಕ್ಕೆ ಅಲಂಕಾರಪ್ರಾಯನಾಗಿದ್ದ. ಇಡೀ ಜಗತ್ತಿನ ಜನಗಳೆಲ್ಲರೂ ಅವನ ಮುಂದೆ ಕೈಮುಗಿದು ನಿಂತು 'ಸ್ವಾಮಿ' ಎಂದು ತುಂಬ ನಮ್ರತೆಯಿಂದ ಮಾತನಾಡುವಷ್ಟು ಗೌರವಕ್ಕೆ ಆತ ಪಾತ್ರನಾಗಿದ್ದ. ಅವನ ಸುತ್ತಲೂ ವಿದ್ಯಾರ್ಥಿಗಳು ಕುಳಿತು ಅವನು ಹೇಳಿಕೊಡುತ್ತಿದ್ದ ಅಷ್ಟಾಂಗಯೋಗವೇ ಮುಂತಾದ ಶಾಸ್ತ್ರಗಳನ್ನು ತುಂಬ ಶ್ರದ್ಧೆಯಿಂದ ಕಲಿಯುತ್ತಿದ್ದರು. ಪ್ರಪಂಚ ವನ್ನು ಕಾಪಾಡುವ ಹೊಣೆಹೊತ್ತ ರಾಜರುಗಳು ಅವನ ಬಳಿ ಅತ್ಯಂತ ಗೌರವಭಾವದಿಂದ ನಡೆದುಕೊಳ್ಳುತ್ತಿದ್ದರು ; ಈತ ರಾಜಗುರು ಎನಿಸಿಕೊಂಡಿದ್ದ. ಇವನು ತುಂಬ ಹಿರಿಯ ವಿದ್ವಾಂಸ ನಾಗಿ ಓಡಾಡುವ ಜ್ಞಾನದ ಮರ ಎಂಬ ಕೀರ್ತಿಯನ್ನು ಪಡೆದಿದ್ದ ಎಲ್ಲ ಶಾಸ್ತ್ರಗಳ ಬಗ್ಗೆಯೂ ಇವನು ತುಂಬ ಖಡಾಖಂಡಿತವಾಗಿ ಮಾತನಾಡಬಲ್ಲ ಮೇಧಾವಿಯಾಗಿದ್ದ. ಇವನನ್ನು ಯಾರೂ ವಾದ ದಲ್ಲಿ ಸೋಲಿಸಲು ಸಾಧ್ಯವಿಲ್ಲ; ಅಷ್ಟು ಸುಂದರವಾಗಿ ನಿರರ್ಗಳ ವಾಗಿ ಮಾತನಾಡುತ್ತಿದ್ದ. ಒಬ್ಬೊಬ್ಬರು ಒಂದೊಂದು ಶಾಸ್ತ್ರದಲ್ಲಿ ಆಳವಾದ ಪಾಂಡಿತ್ಯವನ್ನು ಪಡೆದಿರುವುದು ಈ ಲೋಕದಲ್ಲಿ ಸಾಮಾನ್ಯವಾದುದು; ಆದರೆ ವಾಮಶಕ್ತಿ ಪಂಡಿತ ಎಲ್ಲ ಶಾಸ್ತ್ರ ಗಳಲ್ಲಿಯೂ ಸಮಾನವಾಗಿ ಆಳವಾದ ಪಾಂಡಿತ್ಯವನ್ನು ಪಡೆದಿದ್ದ ಧೀಮಂತ. ಇದು ಶಾಸನಗಳು ವಾಮಶಕ್ತಿಯನ್ನು ಪ್ರಶಂಸೆ ಮಾಡಿರುವ ರೀತಿ. ಇಂತಹ ಶ್ರೇಷ್ಠ ವಿದ್ವಾಂಸರಾದ ಗುರುಗಳ ಕೀರ್ತಿಯನ್ನು ಕೇಳಿ ದೂರದೂರದ ದೇಶಗಳಿಂದಲೂ ವಿದ್ಯಾರ್ಥಿ ಗಳು ಬಂದು ಕೋಡಿಯ ಮಠದಲ್ಲಿ ವಿದ್ಯೆಯನ್ನು ಕಲಿತಿದ್ದರಲ್ಲಿ ಆಶ್ಚರ್ಯವೇನಿಲ್ಲ. ವೀರಶೈವರ ಶರಣರಲ್ಲಿ ಪ್ರಮುಖನಾದ ಅಲ್ಲಮಪ್ರಭುವು ಇದೇ ಮಠದಲ್ಲಿ ಓದಿದನೆಂದು ಹೇಳುತ್ತಾರೆಂಬ ವಿಷಯವನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು.

ಮತ್ತೊಂದು ಮುಖ್ಯವಾದ ಮಠವೆಂದರೆ ಪಂಚಲಿಂಗ

ಮಠ. ಇದು ಜಿಡ್ಡಿಕೆರೆಯ ಏರಿಯ ಮೇಲಿರುವ ಪಂಚಲಿಂಗೇಶ್ವರ ದೇವಸ್ಥಾನದ ಆಡಳಿತಕ್ಕೆ ಒಳಪಟ್ಟಿದ್ದ ಮಠ. ಪಂಚಪಾಂಡವರೇ ಇಲ್ಲಿ ಐದು ಲಿಂಗಗಳನ್ನು ಸ್ಥಾಪಿಸಿದರೆಂದು ಹೇಳುವುದರಿಂದ ಇದು ತುಂಬ ಪ್ರಾಚೀನವಾದ ದೇವಸ್ಥಾನವಾಗಿರಬೇಕು. ದೇವಸ್ಥಾನದ ರೀತಿಯೂ ನಿಜವಾದ ವಿಷಯವೇನೆಂಬುದನ್ನು ಸ್ಪಷ್ಟಪಡಿಸುತ್ತದೆ. ಇದರ ಮೊದಲನೆಯ ಸ್ಥಾನಪತಿಯೆಂದರೆ ಲಕುಲೀಶ ಎಂಬುವನು. ಇವನು ತರ್ಕ ಮುಂತಾದ ಶಾಸ್ತ್ರಗಳಲ್ಲಿ ತುಂಬ ಗಟ್ಟಿಗನಾಗಿದ್ದ. ವಾದದಲ್ಲಿ ಇತರರನ್ನು ತುಂಬ ಸುಲಭವಾಗಿ ಸೋಲಿಸಬಲ್ಲವನಾಗಿದ್ದ ; ಇವನ ಮಾತುಗಳು ಗಂಗಾನದಿಯ ಹಾಗೆ ಒಂದೇ ಸಮನೆ ಹರಿಯುತ್ತಿದ್ದವಂತೆ. ಇವನು ಶಿಷ್ಯರ ಮೇಲೆ ತುಂಬಾ ವಾತ್ಸಲ್ಯವನ್ನಿಟ್ಟು ವಿದ್ಯಾದಾನ ಮಾಡುತ್ತಿದ್ದ. ಇದು ಕಾಳಾಮುಖ ಪಂಥದ ಬ್ರಹ್ಮಚಾರಿಗಳು ಮಾತ್ರ ವಾಸಮಾಡಿ ಆ ವಿದ್ಯೆ ಕಲಿಯುತ್ತಿದ್ದ ಸ್ಥಳ. ಕೋಡಿಯ ಮಠಕ್ಕೆ ಹೇಗೋ ಹಾಗೆಯೇ ಈ ಮಠಕ್ಕೂ ಅನೇಕರು ದತ್ತಿಗಳನ್ನು ಕೊಟ್ಟಿರುವ ವಿಷಯ ಶಾಸನಗಳಲ್ಲಿ ಹೇಳಿದೆ.

ಮೇಲೆ ಹೇಳಿದ ಮಠಗಳಲ್ಲದೆ ಅನೇಕ ಅಗ್ರಹಾರಗಳೂ ಬಳ್ಳಿಗಾವೆಯಲ್ಲಿ ವಿದ್ಯಾದಾನ ಮಾಡುತ್ತಿದ್ದವು. ವಿದ್ಯಾದಾನಕ್ಕಾಗಿ ದಾನಧರ್ಮಗಳನ್ನು ಮಾಡುವುದು ಪುಣ್ಯದ ಕೆಲಸವೆಂದು ಜನ ಭಾವಿಸಿದ್ದರು. ಕಲಚುರಿ ವಂಶದ ಬಿಜ್ಜಳ ಎಂಬ ರಾಜನಲ್ಲಿ ದಂಡಾಧಿಪತಿಯಾಗಿದ್ದ ಕೇಶವ ಅಥವಾ ಕೇಶಿರಾಜ ಎಂಬಾತನು ಬಳ್ಳಿಗಾವೆಯ ದಕ್ಷಿಣ ಭಾಗದಲ್ಲಿದ್ದ ಸುಂದರವಾದ ಜಮೀನನ್ನು ಕೊಂಡುಕೊಂಡನಂತೆ. ಅಲ್ಲಿ ಅನೇಕ ಮನೆಗಳನ್ನು ಕಟ್ಟಿಸಿ ವಿದ್ಯಾವಂತರಾದ ಗುಣವಂತರಾದ ಬ್ರಾಹ್ಮಣ ಕುಟುಂಬಗಳಿಗೆ ದಾನ ಮಾಡಿದ. ಅಷ್ಟೇ ಅಲ್ಲ, ಮನೆಗಳನ್ನು ಕೊಡುವಾಗ ಮನೆಗೆ ಬೇಕಾದ ಸಾಮಗ್ರಿಗಳು, ಹಾಸಿಗೆ–ಮಂಚ ಮುಂತಾದುವುಗಳನ್ನೂ

ದಾನಮಾಡಿ ಕೊಟ್ಟ. ಹೀಗೆ ತಮ್ಮ ಹೊಟ್ಟೆಯ ಪಾಡಿನ ಬಗ್ಗೆ ಹೆಚ್ಚು ಆಲೋಚನೆ ಮಾಡದೆ ವಿದ್ಯೆಯನ್ನು ಬೆಳೆಸಿಕೊಳ್ಳುವುದಕ್ಕೆ ಅವರಿಗೆ ಅನುಕೂಲವಾಯಿತು. ಕೇದಾರೇಶ್ವರ ದೇವಸ್ಥಾನದ ಹಿಂದಿನ ಪ್ರದೇಶವನ್ನು ಈಗಲೂ 'ಕೇಶಿನ ಹರ' ಎಂದು ಕರೆಯುತ್ತಾರೆ. ಇದು ಕೇಶವನ ಅಗ್ರಹಾರ ಎಂಬುದರ ಸಂಕ್ಷಿಪ್ತರೂಪವಿರಬೇಕು ಎಂದು ಕೆಲವರ ಊಹೆ.

ಇವಲ್ಲದೆ ಈ ಊರಿನಲ್ಲಿ ಶಿಲ್ಪಕಲೆಯಲ್ಲಿ ತರಬೇತಿಯನ್ನು ನೀಡುವ ಒಂದು ದೊಡ್ಡ ವಿದ್ಯಾಲಯವೂ ಇದ್ದಿರಬೇಕೆಂದು ಹಲವು ವಿದ್ವಾಂಸರುಗಳು ಅಭಿಪ್ರಾಯ ಪಡುತ್ತಾರೆ. ಏಕೆಂದರೆ ಹಳೆಯ ಬೀಡಿನಂತಹ ಸುಂದರ ದೇವಾಲಯಗಳನ್ನು ನಿರ್ಮಾಣ ಮಾಡುವುದಕ್ಕಾಗಿ ಇಲ್ಲಿಂದ ಕೆಲವು ಶಿಲ್ಪಿಗಳನ್ನು ಕರೆಸಿಕೊಂಡರಂತೆ. ಅವರಲ್ಲಿ ಬಿಲ್ಲೋಜ ಮತ್ತು ನಾಗೋಜ ಎಂಬುವವರು ಮುಖ್ಯರಾದವರು. ಹೀಗೆ ಬಳ್ಳಿಗಾವೆಯು ಒಂದು ದೊಡ್ಡ ವಿದ್ಯಾಕೇಂದ್ರವಾಗಿತ್ತು. ಇಲ್ಲಿಂದ ವಿದ್ಯೆಯನ್ನು ಕಲಿತು ಪಂಡಿತರಾದವರು ಹಲವಾರು ಕಡೆಗಳಿಗೆ ಹೋಗಿ ನೆಲಸಿ ಈ ಊರಿನ ಕೀರ್ತಿಯನ್ನು ಹೆಚ್ಚಿಸಿದ್ದರು.

ತುಂಬ ಉನ್ನತವಾದ ವಿದ್ಯೆಯನ್ನು ಈ ಊರಿನಲ್ಲಿ ಪಡೆಯಲು ಅವಕಾಶವಿದ್ದುದರಿಂದ ಈ ಊರಿನ ಸುತ್ತಮುತ್ತಲ ಜನರು ಮಿಕ್ಕ ಕಡೆಗಳ ಜನಕ್ಕಿಂತ ಹೆಚ್ಚು ವಿದ್ಯಾವಂತರಾಗುವುದು ಸಹಜವೇ ಆಗಿದೆ. ಈ ಊರಿನಲ್ಲಿ ಸಿಕ್ಕಿರುವ ಶಾಸನಗಳಲ್ಲಿ ಹಲವು ಕನ್ನಡದಲ್ಲಿವೆ, ಮತ್ತೆ ಕೆಲವು ಸಂಸ್ಕೃತದಲ್ಲಿವೆ. ಕನ್ನಡ ಶಾಸನಗಳ ಮಧ್ಯೆಯೂ ಸಂಸ್ಕೃತ ಶ್ಲೋಕಗಳಿವೆ. ಶಾಸನಗಳಲ್ಲಿ ಗದ್ಯವು ಹೇಗೋ ಹಾಗೆಯೇ ಪದ್ಯಗಳೂ ಇವೆ. ಸಾಮಾನ್ಯವಾಗಿ ಉಳಿದ ಎಷ್ಟೋ ಕಡೆಯ ಶಾಸನಗಳಿಗಿಂತ ಇಲ್ಲಿನ ಶಾಸನಗಳು ತುಂಬ ಪಾಂಡಿತ್ಯಪೂರ್ಣವಾದುವು. ತುಂಬ ಸುಂದರವಾದ ವರ್ಣನೆಗಳು ಈ ಶಾಸನಗಳಲ್ಲಿ ಬರುತ್ತವೆ. ಎಂದರೆ ಎಷ್ಟೋ ಜನ ಸಣ್ಣಪುಟ್ಟ

ಕವಿಗಳು ಈ ಭಾಗದಲ್ಲಿ ನೆಲೆಸಿದ್ದಿರಬೇಕು. ಆದ್ದರಿಂದಲೇ ಅವರು ಬರೆದ ವರ್ಣನೆಗಳು ಶಾಸನಗಳ ಮೂಲಕವಾಗಿ ನಮಗೆ ಸಿಗುತ್ತವೆ. ಆದಲ್ಲದೆ ಶಾಂತಿನಾಥ ಎಂಬ ಒಬ್ಬ ಪ್ರಸಿದ್ಧ ಜೈನಕವಿ ಈ ಪ್ರಾಂತ್ಯಕ್ಕೆ ಸೇರಿದವನು. ಚಾಳುಕ್ಯ ಭುವನೈಕಮಲ್ಲನ ಆಶ್ರಯದಲ್ಲಿದ್ದ ಲಕ್ಷ್ಮನೃಪ ಎಂಬುವನ ಆಶ್ರಯದಲ್ಲಿ ಈತನಿದ್ದ. ಇವನು ತನ್ನ 'ಸುಕುಮಾರ ಚರಿತೆ' ಎಂಬ ಕಾವ್ಯವನ್ನು ಕ್ರಿ.ಶ. ೧೦೭೦ರಲ್ಲಿ ಬರೆದ.

ವಿದ್ಯಾದಾನವು ಕೊನೆಯುವರೆಗೂ ಉಳಿಯುವಂತಹದು. ತಾವೇ ಸ್ವತಃ ವಿದ್ಯಾವಂತರಲ್ಲದವರು, ಅಥವಾ ವಿದ್ಯೆಯನ್ನು ಹೇಳಿಕೊಡಲಾಗದವರು, ವಿದ್ಯಾದಾನಕ್ಕೆ ಸಹಾಯ ಮಾಡುತ್ತಿದ್ದರು. ರಾಜ ವಿದ್ಯೆಯ ವಿಷಯುಗಳ ಬಗ್ಗೆಯಾಗಲೀ ವಿದ್ಯಾಶಾಲೆಗಳ ಆಡಳಿತದ ಬಗ್ಗೆಯಾಗಲೀ ಈಗಿನಂತೆ ಮಧ್ಯೆ ಪ್ರವೇಶಿಸುತ್ತಿರಲಿಲ್ಲ. ಅವನೂ ಹಲವಾರು ವಿದ್ಯಾಕೇಂದ್ರಗಳಿಗೆ ದತ್ತಿಯನ್ನು ಬಿಟ್ಟುಕೊಡುತ್ತಿದ್ದ, ಅಷ್ಟೆ. ಕೆಲವು ಶ್ರೀಮಂತರು ಅನೇಕ ಜನ ಬ್ರಾಹ್ಮಣರಿಗೆ ವಸತಿ ಕಲ್ಪಿಸಿಕೊಟ್ಟು ವಿದ್ಯಾಪ್ರಸಾರವನ್ನು ಮಾಡಿದ ಉದಾಹರಣೆಯನ್ನು ಆಗಲೇ ನೋಡಿದೆವು. ಕೆಲವು ಜನರು ವಿದ್ಯೆಯನ್ನು ಹೇಳಿಕೊಡುವ ಉಪಾಧ್ಯಾಯರಿಗೆ ದತ್ತಿಯನ್ನು ಬಿಡುತ್ತಿದ್ದರು. ದೂರ ಪ್ರದೇಶಗಳ ವಿದ್ಯಾರ್ಥಿಗಳಿಗಾಗಿ ಕೆಲವರು ವಸತಿ ಸೌಕರ್ಯಕ್ಕಾಗಿ ಸಹಾಯಮಾಡಿದರೆ, ಮತ್ತೆ ಕೆಲವರು ಅವರ ಆಹಾರಕ್ಕಾಗಿ ದಾನಮಾಡುತ್ತಿದ್ದರು. ಈಗ ವಿದ್ಯಾರ್ಥಿನಿಲಯಗಳಿರುವಂತೆಯೇ ಆಗಲೂ ವಿದ್ಯಾರ್ಥಿನಿಲಯಗಳಿರುತ್ತಿದ್ದವು. ಕೋಡಿಯ ಮಠದಲ್ಲಿ ಮಠಕ್ಕೆ ಸೇರಿದಂತೆಯೇ ವಿದ್ಯಾರ್ಥಿನಿಲಯ ವೊಂದಿತ್ತು.

ಬಳ್ಳಿಗಾವೆಯ ಊರಿನಲ್ಲಿ ಮತ್ತು ಸುತ್ತುಮುತ್ತಲೂ ವೀರಗಲ್ಲುಗಳೂ ಮಾಸ್ತಿಕಲ್ಲುಗಳೂ ದೊರೆಯುತ್ತವೆ. ಪ್ರಾಚೀನ

ಕರ್ಣಾಟಕದಲ್ಲಿ ಧೈರ್ಯ ಸಾಹಸಗಳಿಗೆ ತುಂಬ ಗೌರವವಿತ್ತು. ಹೇಡಿಯಾಗಿ ಬಾಳುವುದಕ್ಕಿಂತಲೂ ಸಾವೇ ಮೇಲೆಂಬ ಭಾವನೆ ಜನರಲ್ಲಿತ್ತು. ಹೀಗಾಗಿ ಒಳ್ಳೆಯ ಉದ್ದೇಶಗಳಿಗಾಗಿ ಸಾಹಸಕೃತ್ಯಗಳನ್ನು ಜನ ಮಾಡುತ್ತಿದ್ದರು ; ಇದರಿಂದ ತಮಗೆ ಪುಣ್ಯ ಬರುತ್ತದೆಂಬ ನಂಬಿಕೆ ಅವರಿಗಿತ್ತು. ರಾಜನ ಬಗ್ಗೆ ನಿಷ್ಠೆ ತೋರಿರುವುದು ತಮ್ಮ ಕರ್ತವ್ಯವೆಂದು ಭಾವಿಸಿದ್ದರು ; ಹೀಗೆ ಹೋರಾಡಿ ಗೆದ್ದರೆ ಕೀರ್ತಿಬರುತ್ತದೆ, ಸತ್ತರೆ ವೀರಸ್ವರ್ಗ ದೊರೆಯುತ್ತದೆ ಎಂದು ಅವರು ನಂಬಿದ್ದರು. ಆದ್ದರಿಂದ ಸಾಮಾನ್ಯವಾಗಿ ಯುದ್ಧಗಳಿಗೆ ಹಿಂದುಮುಂದು ನೋಡದೆ ಹೋಗುತ್ತಿದ್ದರು. ಇಂಥವರು ಯುದ್ಧದಲ್ಲಿ ಸತ್ತರೆ ಅವರ ಕಡೆಯವರು ಅವರ ಹೆಸರನ್ನು ಉಳಿಸುವುದಕ್ಕಾಗಿ ನೆಟ್ಟ ಕಲ್ಲುಗಳೇ ವೀರಗಲ್ಲುಗಳು. ಕೆಲವು ಕೇವಲ ಶಾಸನಗಳಾಗಿದ್ದರೆ ಮತ್ತೆ ಕೆಲವುಗಳಲ್ಲಿ ಚಿತ್ರಗಳನ್ನು ಕೆತ್ತಿರುತ್ತಾರೆ. ಎರಡು, ಮೂರು, ನಾಲ್ಕು ಹಂತಗಳಲ್ಲಿ ಚಿತ್ರಗಳನ್ನು ಕೆತ್ತಿರುವ ವೀರಗಲ್ಲುಗಳು ನಮಗೆ ದೊರೆಯುತ್ತವೆ. ನಮಗೆ ಸಿಕ್ಕಿರುವ ವೀರಗಲ್ಲುಗಳಲ್ಲಿ ಮೂರು ಹಂತದ ಚಿತ್ರಗಳಿರುವುದೇ ಹೆಚ್ಚು. ಕೆಳಗಿನ ಹಂತದಲ್ಲಿ ಯುದ್ಧಮಾಡುವ ಚಿತ್ರವಿರುತ್ತದೆ ; ಮಧ್ಯದ ಹಂತದಲ್ಲಿ ಸತ್ತ ವೀರರನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುವ ಚಿತ್ರವಿರುತ್ತದೆ ; ಮೇಲುಗಡೆಯ ಚಿತ್ರ ವೀರಯೋಧ ದೇವರ ಬಳಿಯಿರುವುದು. ಈ ಕಲ್ಲುಗಳಲ್ಲಿ ಚಂದ್ರಸೂರ್ಯರ ಚಿತ್ರಗಳಿದ್ದು ಈ ವೀರರ ಹೆಸರು ಚಂದ್ರಸೂರ್ಯರು ಇರುವ ತನಕ ಎಂದರೆ ಶಾಶ್ವತವಾಗಿರುತ್ತದೆ ಎಂಬ ಭಾವನೆಯನ್ನು ಸೂಚಿಸುತ್ತದೆ.

ಕೇವಲ ಯುದ್ಧದಲ್ಲಿ ಸತ್ತವರಿಗಷ್ಟೇ ಅಲ್ಲ ವೀರಗಲ್ಲುಗಳನ್ನು ಸ್ಥಾಪಿಸಿರುವುದು. ಇನ್ನೂ ಹಲವಾರು ಸಾಹಸಕಾರ್ಯಗಳನ್ನು ಮಾಡಿದವರ ಹೆಸರನ್ನು ಶಾಶ್ವತವಾಗಿ ಉಳಿಸಲು ನೆಟ್ಟ ವೀರಗಲ್ಲು

ಗಳಿವೆ. ನಮ್ಮ ದೇಶ ಪ್ರಮುಖವಾಗಿ ರೈತರಿಂದ ಕೂಡಿದ ದೇಶ. ಇಲ್ಲಿ ಹಸು–ಕರು ಮುಂತಾದ ಸಾಕುಪ್ರಾಣಿಗಳೇ ಆಸ್ತಿ. ಆದ್ದರಿಂದ ಈ ರೀತಿ ಹಸು–ಕರುಗಳನ್ನು ಕಳ್ಳರು ಹೊಡೆದುಕೊಂಡು ಹೋಗುವಾಗ ಯಾರಾದರೂ ಈ ಕಳ್ಳರೊಡನೆ ಹೋರಾಡಿ ಸತ್ತರೆ ಅಂತಹವರ ನೆನಪಿಗಾಗಿ ಕಲ್ಲುಗಳನ್ನು ನೆಟ್ಟರು. ಹಾಗೆಯೇ ನಮ್ಮ ದೇಶದಲ್ಲಿ ಸ್ತ್ರೀಯರ ಪಾತಿವ್ರತ್ಯಕ್ಕೆ ತುಂಬ ಗೌರವ. ಸ್ತ್ರೀಯ ಮಾನ–ಭಂಗ ಮಾಡಲು ಯಾರಾದರೂ ಯತ್ನಿಸಿದರೆ ಅಂತಹವರೊಡನೆ ಹೋರಾಡಿ ಸತ್ತವರು ಅನೇಕರು. ಅವರ ಹೆಸರಿನ ಕಲ್ಲುಗಳಿವೆ. ಹಿಂದಿನ ಕಾಲದಲ್ಲಿ ಒಂದೂರಿನಿಂದ ಮತ್ತೊಂದೂರಿಗೆ ಹೋಗುವುದು ತುಂಬ ಕಷ್ಟದ ಕೆಲಸವಾಗಿತ್ತು. ಪ್ರಕೃತಿಯಿಂದಾಗಬಹುದಾದ ಗಾಳಿ–ಮಳೆ ಮುಂತಾದ ತೊಂದರೆಗಳಲ್ಲದೆ ಇತರ ಅನೇಕ ರೀತಿಯ ತೊಂದರೆಗಳನ್ನೂ ಅವರು ಎದುರಿಸಬೇಕಾಗಿತ್ತು. ಕಾಡುಗಳ ಮಧ್ಯೆ ಪ್ರಯಾಣ ಮಾಡಬೇಕಾದಾಗ ಅವರನ್ನು ಕಾಡುಮೃಗಗಳು ಕಷ್ಟಕ್ಕೆ ಈಡು ಮಾಡುತ್ತಿದ್ದವು. ಅಂತಹ ಪ್ರಸಂಗಗಳಲ್ಲಿ ಧೈರ್ಯ ಸಾಹಸಗಳಿಂದ ಕೂಡಿದ ವ್ಯಕ್ತಿಗಳು ಕಾಡುಪ್ರಾಣಿಗಳೊಡನೆ ಹೋರಾಡಿ ತಮ್ಮ ಕುಟುಂಬದವರನ್ನು ಉಳಿಸುತ್ತಿದ್ದರು. ಹೀಗೆ ಹೋರಾಡುವಾಗ ಅವರು ಎಷ್ಟೋ ಪ್ರಸಂಗಗಳಲ್ಲಿ ತಾವು ಸತ್ತು ಮನೆಯವರನ್ನು ಉಳಿಸುತ್ತಿದ್ದರು. ಅವರ ನೆನಪಿಗಾಗಿ ಶಾಸನಗಳನ್ನು ಕೆತ್ತಿಸಿ ನೆಡುತ್ತಿದ್ದರು. ಪ್ರಯಾಣದ ಕಾಲದಲ್ಲಿ ಒದಗುತ್ತಿದ್ದ ಮತ್ತೊಂದು ಕಷ್ಟವೆಂದರೆ ಕಳ್ಳರ ಕಾಟ. ಕಳ್ಳರೊಡನೆ ಹೋರಾಡಿ ಸತ್ತವರ ನೆನಪಿಗಾಗಿ ನೆಟ್ಟ ಅನೇಕ ಶಾಸನಗಳನ್ನು ನಾವು ಕಾಣುತ್ತೇವೆ. ಅದೇ ರೀತಿ ಬೇಟೆಯಾಡಲು ಹೋದಾಗ ಪ್ರಾಣಿಯೊಡನೆ ಕಾದಿ ಸತ್ತವರ ವೀರಗಲ್ಲುಗಳನ್ನು ನಾವು ನೋಡುತ್ತೇವೆ.

ಇನ್ನೊಂದು ವಿಶಿಷ್ಟ ರೀತಿಯ ಸಂಪ್ರದಾಯ ಪ್ರಾಚೀನ

ಕಾಲದ ಕನ್ನಡಿಗರಲ್ಲಿ ರೂಢಿಯಲ್ಲಿತ್ತು. ತಾನು ಯಾವ ರಾಜನ ಅಥವಾ ಸಾಮಂತನ ಕರುಣೆಯಿಂದ ಬದುಕಿದ್ದಾನೆಯೋ ಅಂತಹ ರಾಜ ಅಥವಾ ಸಾಮಂತರಿಗೆ ಯಾವ ಕಷ್ಟವಾದರೂ ಒದಗಿದರೆ ಆಗ ಇವರು ಅವರಿಗಾಗಿ ಹೋರಾಡುತ್ತಿದ್ದರು. ಇಂತಹ ಹೋರಾಟದಲ್ಲಿ ಸತ್ತವರ ಸ್ಮಾರಕವಾಗಿಯೂ ಕಲ್ಲು ನೆಡುತ್ತಿದ್ದರು. ಇಂತಹವರನ್ನು 'ಜೋಳವಾಳಿ'ಗಳೆಂದು ಕರೆಯುತ್ತಿದ್ದರು. ಜೋಳ ಒಂದು ಧಾನ್ಯವಲ್ಲವೆ ? ಎಂದರೆ ತನಗೆ ಆಹಾರವನ್ನು ಕೊಟ್ಟು ಕಾಪಾಡಿದವನಿಗೆ ಇವರು ಈ ರೀತಿ ತಮ್ಮ ಕೃತಜ್ಞತೆಯನ್ನು ತೋರಿಸುತ್ತಿದ್ದರು. ಇದಕ್ಕಿಂತಲೂ ಕಠಿನವಾದ ವ್ರತವೊಂದಿದೆ. ತನ್ನ ರಾಜನು ಸತ್ತ ತಕ್ಷಣ ತಾನೂ ಸಾಯುವುದು. ಇಂತಹವರನ್ನು 'ವೇಳೆವಾಳಿ'ಗಳೆಂದು ಕರೆಯುತ್ತಾರೆ. ಇಂತಹವರು ತಮ್ಮ ರಾಜನನ್ನು ಕಾಪಾಡುವ ಹೊಣೆಯನ್ನು ಹೊತ್ತವರು. ರಾಜನು ತಿನ್ನಬೇಕಾದ ಆಹಾರ ಮುಂತಾದವನ್ನು ಇವರು ತಿಂದು ಪರೀಕ್ಷಿಸಿ ಅದರಲ್ಲಿ ವಿಷ ಮುಂತಾದುವೇನೂ ಬೆರೆತಿಲ್ಲವೆಂದು ದೃಢಪಡಿಸಿಕೊಂಡು ರಾಜನಿಗೆ ಕೊಡುತ್ತಿದ್ದರು. ರಾಜನು ಬಿಡಾರ ಮಾಡಬೇಕಾದ ಜಾಗವನ್ನು ಪರೀಕ್ಷಿಸುತ್ತಿದ್ದರು, ಇವರು. ಈ ರೀತಿ ರಾಜನಿಗೆ ತೊಂದರೆಬಾರದ ರೀತಿ ವರ್ತಿಸುವುದೇ ಇವರ ಕರ್ತವ್ಯ. ಇವರು ತಾವು 'ವೇಳೆವಾಳಿ'ಗಳಾಗಿ ವ್ರತವನ್ನು ತೊಡುವಾಗ ತಮ್ಮ ಕೈಯ ಬೆರಳೊಂದನ್ನು ಕಡಿದುಕೊಟ್ಟು ತಮ್ಮ ನಿಷ್ಠೆಯನ್ನು ತೋರಿಸುತ್ತಿದ್ದರು, ತಾವು ಧೈರ್ಯವಂತರೆಂಬುದನ್ನು ದೃಢಪಡಿಸುತ್ತಿದ್ದರು.

ಬಳ್ಳಿಗಾವೆಯ ಕೇದಾರೇಶ್ವರ ದೇವಸ್ಥಾನದ ಪ್ರಾಕಾರದಲ್ಲಿ ಒಂದು ಕೆತ್ತನೆಯಿದೆ. ಅದರಲ್ಲಿ ಸ್ತಂಭವೊಂದರ ಮೇಲಿನಿಂದ ಬಿದ್ದು ಕೆಳಗಿರುವ ಬಾಣಗಳಿಗೆ ಸಿಕ್ಕಿಹಾಕಿಕೊಂಡಿರುವ ಚಿತ್ರವಿದೆ. ಇದನ್ನು 'ಶೂಲಬ್ರಹ್ಮಯ್ಯನ ಕಲ್ಲು' ಎಂದು ಕರೆಯುತ್ತಾರೆ. ಈ

ಕಲ್ಲಿಗೆ ಈ ರೀತಿ ವಿವರಣೆ ಕೊಡುತ್ತಾರೆ. ಕದಂಬ ಸತ್ಯಾಶ್ರಯನು ಕಣ್ಣಾನೂರಿನಲ್ಲಿ ಆಳುತ್ತಿದ್ದಾಗ ಬನವಾಸೆಯು ಬಲ್ಲವರಸ ಎಂಬು ವವನ ಅಧೀನದಲ್ಲಿತ್ತು. ಆಗ ತುಳುವ ಚಂಡಿಗನೆಂಬ ಒಬ್ಬ ಪಾಳೆಯಗಾರನಿದ್ದ. ಅವನು ಪೆರುಮಾಳಮ್ಮನ ದೇವಸ್ಥಾನವನ್ನು ಕಟ್ಟಿಸಿ ಅದಕ್ಕೆ ತಾನಿಷ್ಟು ಜಮೀನನ್ನು ದಾನಮಾಡಿದ್ದೇನೆ ಎಂದು ಕೈಯೆತ್ತಿ ತೋರಿಸಿದನಂತೆ. ಆದರೆ ಸತ್ಯಾಶ್ರಯ ಮತ್ತು ಬಲ್ಲವರಸರು ಬಳ್ಳಿಗಾವೆಗೆ ಬಂದಾಗ ಕೋಟೆಯ ಹತ್ತಿರವಿದ್ದ ಭೂಮಿಯನ್ನು ದಾನವಾಗಿ ಕೊಟ್ಟಿದ್ದಕ್ಕೆ ಚಂಡಿಗನನ್ನು ಆಕ್ಷೇಪಿಸು ತ್ತಾರೆ; ಅದನ್ನು ಹಿಂದೆಗೆದುಕೊಳ್ಳಲು ಆಜ್ಞಾಪಿಸುತ್ತಾರೆ ; ಇಲ್ಲದಿದ್ದರೆ ಎತ್ತಿದ್ದ ಕೈಯನ್ನೆ ಕತ್ತರಿಸುವುದಾಗಿ ಬೆದರಿಸುತ್ತಾರೆ. ಒಂದು ಬಾರಿ ದಾನಕೊಟ್ಟಿದ್ದನ್ನು ಹಿಂತೆಗೆದುಕೊಳ್ಳದ ಚಂಡಿಗನು ಅವಮಾನವನ್ನು ಸಹಿಸುವುದಕ್ಕಿಂತ ಸಾಯುವುದೇ ಮೇಲೆಂದು ನಿರ್ಧರಿಸುತ್ತಾನೆ. ಹಿಂದೆ ಹೇಳಿದ ಭೇರುಂಡೇಶ್ವರ ಸ್ತಂಭದ ಮೇಲೆ ಹತ್ತಿ ಕೆಳಗೆ ನೆಟ್ಟ ಸಾಲು ಬಾಣಗಳ ಮೇಲೆ ಬಿದ್ದು ಪ್ರಾಣ ಕಳೆದುಕೊಳ್ಳುತ್ತಾನೆ. ಆದರೆ ಈ ಕಲ್ಲಿಗೆ ಸಂಬಂಧಿಸಿದ ಶಾಸನವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಈ ಕತೆ ನಿಜವಲ್ಲವೆನ್ನುವುದು ಗೊತ್ತಾಗುತ್ತದೆ. ಈತ ಒಬ್ಬ 'ವೇಳೆವಾಳಿ'. ತನ್ನ ರಾಜ ಸತ್ತಾಗ ತಾನೂ ಸತ್ತು ಕೃತಜ್ಞತೆ ತೋರಿಸಿದ.

'ಮಹಾಸತಿ ಕಲ್ಲುಗಳು' ಎನ್ನುವುದೇ 'ಮಾಸ್ತಿಕಲ್ಲು'ಗಳು ಎಂದಾಗಿದೆ. ಹೆಸರೇ ಸೂಚಿಸುವಂತೆ ಇದು ಮಹಾಪತಿವ್ರತೆ ಯಾದವಳು ಸತ್ತಾಗ ಅವಳ ನೆನಪಿನಲ್ಲಿ ನೆಟ್ಟ ಕಲ್ಲು. ತಮ್ಮ ಗಂಡ ಸತ್ತಾಗ ಕೆಲವರು ಅವನ ಜೊತೆಯಲ್ಲಿಯೇ ಬೆಂಕಿಯಲ್ಲಿ ಬಿದ್ದು ಸಾಯುತ್ತಿದ್ದರು. ಇದನ್ನು 'ಸತಿ'ಪದ್ಧತಿ ಎಂದು ಕರೆಯುತ್ತಾರೆ.

ಹಿಂದೆ ಮುತ್ತೈದೆಯಾಗಿ ಸಾಯುವುದು ಆದರ್ಶವೆಂದು ಭಾವಿಸಿದ್ದರಿಂದ ಗಂಡಸತ್ತ ತಕ್ಷಣ ಅವನ ಜೊತೆಯಲ್ಲಿ ತಾವೂ

ಚಿತೆಯಲ್ಲಿ ಬೀಳುತ್ತಿದ್ದರು. ಇಂತಹ ಪತಿವ್ರತೆಯರು ಜನರ ನೆನಪಿನಲ್ಲಿ ಸದಾ ಉಳಿಯುವುದಾಕ್ಕಾಗಿ ಮಾಸ್ತಿ ಕಲ್ಲನ್ನು ನೆಡುವ ಸಂಪ್ರದಾಯ ಬಂದಿತು. ಸಾಮಾನ್ಯವಾಗಿ ಈ ಕಲ್ಲುಗಳಲ್ಲಿ ಒಬ್ಬ ಸ್ತ್ರೀಯ ಚಿತ್ರವಿರುತ್ತದೆ. ಆಕೆಯು ಬಲ ತೋಳನ್ನು ಮೇಲೆತ್ತಿರುತ್ತಾಳೆ ; ಆ ಕೈಯಲ್ಲಿ ಒಂದು ಮಾದಲದ ಹಣ್ಣು ಇರುತ್ತದೆ. ಆಕೆಯ ಹಿಂದೆ ಬೆಂಕಿಯ ಜ್ವಾಲೆಯನ್ನು ಕೆಲವು ಮಾಸ್ತಿಕಲ್ಲುಗಳ ಮೇಲೆ ಕೆತ್ತಿರುತ್ತಾರೆ. ಕೆಲವು ಮಾಸ್ತಿಕಲ್ಲುಗಳಲ್ಲಿ ಕೇವಲ ಎತ್ತಿದ ತೋಳಿನ ಚಿತ್ರವಿರುತ್ತದೆ. ಕೆಲವು ಕಲ್ಲುಗಳಲ್ಲಿ ಗಂಡಹೆಂಡತಿಯರ ಚಿತ್ರವನ್ನು ಕೆತ್ತಿರುತ್ತಾರೆ.

ಇವಲ್ಲದೆ ಇತರ ರೀತಿಯಲ್ಲಿ ಸತ್ತವರ ಹೆಸರುಗಳನ್ನು ಶಾಶ್ವತವಾಗಿ ಮಾಡುವ ಉದ್ದೇಶದಿಂದ ನೆಟ್ಟ ಕಲ್ಲುಗಳೂ ಉಂಟು. ಬಳ್ಳಿಗಾವೆಯಲ್ಲಿ ಹಿಂದೆ ಜೈನಧರ್ಮವನ್ನು ಅವಲಂಬಿಸಿದ ಜನರು ಹಲವಾರು ಮಂದಿಯಿದ್ದರು. ಅವರಲ್ಲಿ ಕೆಲವರು ಧಾರ್ಮಿಕ ಕಾರಣಗಳಿಗೆ ತಮ್ಮನ್ನು ತಾವೇ ಬಲಿ ಕೊಟ್ಟು ಕೊಂಡರು. ಅನ್ನಪಾನಾದಿಗಳನ್ನು ಬಿಟ್ಟು ಒಂದೇ ಮನಸ್ಸಿನಿಂದ ಜಿನನ ಧ್ಯಾನ ಮಾಡಿ ಸಾಯುವುದನ್ನು 'ಸಮಾಧಿ ಮರಣ' ಅಥವಾ 'ಸನ್ಯಸನ ವಿಧಿ' ಎಂದು ಕರೆಯುತ್ತಿದ್ದರು. ಹೀಗೆ ಸತ್ತವರ ಸ್ಮಾರಕವಾಗಿ ಕೆತ್ತಿಸಿದ ಕಲ್ಲುಗಳನ್ನು 'ನಿಸಿದಿಕಲ್ಲು'ಗಳು ಎಂದು ಕರೆಯುತ್ತಾರೆ. ಇವುಗಳಲ್ಲಿ ಕೆತ್ತಿದ ಚಿತ್ರದಲ್ಲಿ ಕೆಳಭಾಗದಲ್ಲಿ ವ್ರತವನ್ನು ಹೊತ್ತ ವ್ಯಕ್ತಿಯನ್ನು ಕೆತ್ತಿರುತ್ತಾರೆ ; ಮೇಲಿನ ಚಿತ್ರದಲ್ಲಿ ಆ ವ್ಯಕ್ತಿಯು ಜಿನನ ಹತ್ತಿರ ಹೋಗಿರುವುದಾಗಿ ಕೆತ್ತಿರುತ್ತಾರೆ. 'ಸಮಾಧಿಮರಣ'ದಲ್ಲಿ ಅನೇಕ ರೀತಿಗಳುಂಟು,'ಇಂಗಿನೀಮರಣ''ಪಾಲುಗಮಣ', 'ಸಲ್ಲೇಖನ', ಮುಂತಾದವು. ಇಂತಹ ಕೆಲವು ಕಲ್ಲುಗಳನ್ನು ಬಳ್ಳಿಗಾವೆಯಲ್ಲಿ ನೋಡಬಹುದು.

ಹೀಗೆ ವೀರಗಲ್ಲುಗಳು, ಮಾಸ್ತಿಕಲ್ಲುಗಳು, ನಿಸಿದಿಗೆ ಕಲ್ಲು



ಮಾಸ್ತಿಕಲ್ಲು ಮತ್ತು ನಿಸಿದಿ ಕಲ್ಲುಗಳು

ಗಳು ಮುಂತಾದುವುಗಳಿಂದ ಪ್ರಾಚೀನ ಕರ್ನಾಟಕದ ಜನರು ಧಾರ್ಮಿಕ ವ್ರತಗಳನ್ನು ತೊಟ್ಟು ಸ್ವಸಂತೋಷದಿಂದ ಸಾಯು ತ್ತಿದ್ದರು; ತನ್ನ ರಾಜ ಅಥವಾ ಯಜಮಾನನಿಗೆ ಕೃತಜ್ಞತೆಯನ್ನು ತೋರಿಸಿ ಸಾಯುತ್ತಿದ್ದರು ; ಸ್ತ್ರೀಯರು ತಮ್ಮ ಪಾತಿವ್ರತ್ಯವನ್ನು ಶ್ರೇಷ್ಠವೆಂದು ಭಾವಿಸಿ ಅಗ್ನಿಪ್ರವೇಶ ಮಾಡುತ್ತಿದ್ದರು ಎಂಬ ವಿಚಾರ ತಿಳಿಯುತ್ತದೆ. ಇವರು ಈ ರೀತಿ ಮಾಡಿದ್ದು ಯಾವುದೋ ಒಂದು ದೊಡ್ಡ ಆದರ್ಶವನ್ನು ಸಾಧಿಸುವುದಕ್ಕಾಗಿ. ಅವರಿಗೆ ಆದರ್ಶದ ಎದುರಿಗೆ ಸಾವು ದೊಡ್ಡ ವಿಷಯವಾಗಿ ಇರಲಿಲ್ಲ. ಎಲ್ಲ ಪ್ರಾಣಿಗಳಿಗೂ ಮನುಷ್ಯನಿಗೂ ಇರುವ ಬಹುದೊಡ್ಡ ಭಯ ಎಂದರೆ ಸಾವಿನ ಭಯ. ಅಂತಹ ಭಯವನ್ನು ಹೋಗಲಾಡಿಸು ವಂತಹ ನಂಬಿಕೆ ಅವರಲ್ಲಿ ಇದ್ದುದರಿಂದಲೇ ಅವರು ಸ್ವಸಂತೋಷ ದಿಂದ ಸಾಯಲು ಸಿದ್ಧರಾಗುತ್ತಿದ್ದುದು.

ಬಳ್ಳಿಗಾವೆ ಈ ರೀತಿ ಒಂದು ದೊಡ್ಡ ಸಾಂಸ್ಕೃತಿಕ ಕೇಂದ್ರ ವಾಗಿತ್ತೆಂದು ಊಹಿಸಬಹುದು. ಬಹು ದೊಡ್ಡ ವಿದ್ಯಾಕೇಂದ್ರವೂ ಆಗಿದ್ದಿತು. ಹಾಗೆಯೇ ತುಂಬ ವೈಭವದಿಂದ ಮೆರೆದ ಬನವಾಸೆ ೧೨೦೦೦ ಪ್ರಾಂತ್ಯದ ರಾಜಧಾನಿಯಾಗಿತ್ತು. ಈ ಊರಷ್ಟೇ ಅಲ್ಲದೆ ಇಲ್ಲಿನ ಸುತ್ತಮುತ್ತಲೂ ಇರುವ ಕೆಲವು ಊರುಗಳೂ ತುಂಬ ಪ್ರಮುಖವಾಗಿವೆ. ಈಗೆಲ್ಲ ಇವು ತುಂಬ ಸಣ್ಣ ಗ್ರಾಮಗಳಾಗಿದ್ದರೂ ಒಂದೊಂದು ಕಾಲದಲ್ಲಿ ಒಂದೊಂದು ಊರು ಪ್ರಾಮುಖ್ಯವನ್ನು ಪಡೆದಿತ್ತು.

ಬಳ್ಳಿಗಾವೆಯಿಂದ ಮೂರು ಮೈಲಿ ದೂರವಿರುವ ತಾಳ ಗುಂದವು ಕನ್ನಡ ನಾಡಿನ ಚರಿತ್ರೆಯ ದೃಷ್ಟಿಯಿಂದ ತುಂಬ ಮುಖ್ಯವಾದ ಊರು. ಕನ್ನಡಿಗರ ಮೊದಲ ರಾಜವಂಶವಾದ ಕದಂಬ ವಂಶವು ಈ ಊರಿಗೆ ಸೇರಿದುದು. ಇದು ಒಂದು ಬ್ರಾಹ್ಮಣ ವಂಶ. ಹೆಚ್ಚು ವಿದ್ಯೆಯನ್ನು ಕಲಿಯಲು ಕಾಂಚಿಗೆ ಹೋದ ಈ

ವಂಶದ ಮಯೂರಶರ್ಮನೆಂಬುವನು ಯಾವುದೋ ಕಾರಣದಿಂದ ಅವಮಾನಿತನಾಗುತ್ತಾನೆ. ಆಗ ಮಯೂರಶರ್ಮನು ಕೋಪದಿಂದ ತಾನು ಬಲಿಷ್ಠವಾದ ರಾಜ್ಯವೊಂದನ್ನು ಕಟ್ಟುವುದಾಗಿ ಪ್ರತಿಜ್ಞೆ ಮಾಡುತ್ತಾನಂತೆ. ಮೊದಮೊದಲು ಕೆಲವು ಚಿಕ್ಕಪುಟ್ಟ ಪ್ರದೇಶಗಳನ್ನು ಕೈವಶಮಾಡಿಕೊಂಡ ಮಯೂರಶರ್ಮನು ಬರಬರುತ್ತ ತನ್ನ ಸಾಮರ್ಥ್ಯದಿಂದ ದೊಡ್ಡ ರಾಜ್ಯವೊಂದರ ಅಧಿಪತಿಯಾಗುತ್ತಾನೆ. ಇವನ ವಂಶದ ರಾಜರುಗಳನ್ನೇ ನಾವು ಕದಂಬವಂಶದವರೆನ್ನುವುದು. ಇದಕ್ಕೆ ಕಾರಣ ಈ ವಂಶದ ಮೂಲಪುರುಷರ ಮನೆಯ ಅಂಗಳದಲ್ಲಿ ಒಂದು ಕದಂಬವೃಕ್ಷವಿದ್ದಿತು.

ಈಗ ತಾಳಗುಂದ ಒಂದು ಚಿಕ್ಕಹಳ್ಳಿ. ಆದರೆ ಅಲ್ಲಿನ ಜನಗಳು ಈ ಊರಿನ ಮಯೂರಶರ್ಮನು ಎಷ್ಟು ಸ್ವಾಭಿಮಾನಿಯೋ ಅಷ್ಟೇ ಸ್ವಾಭಿಮಾನಿಗಳೆಂದು ಹೇಳುತ್ತಾರೆ. ತಾಳಗುಂದದಲ್ಲಿ ಪ್ರಣವೇಶ್ವರ ಎಂಬ ದೇವಾಲಯವಿದೆ. ಇದು ಶಿಲ್ಪದಲ್ಲಿ ಉತ್ತಮವಾದ ದೇವಾಲಯವೇನಲ್ಲ ; ಆದರೆ ದಕ್ಷಿಣ ಭಾರತದಲ್ಲೆಲ್ಲ ಕೈಕಟ್ಟಡದ ದೇವಸ್ಥಾನಗಳಲ್ಲಿ ಇದು ಅತ್ಯಂತ ಪ್ರಾಚೀನವಾದುದು. ಇದರಲ್ಲಿರುವ ಸುಮಾರು ಒಂಬತ್ತು ಅಡಿಗಳಷ್ಟು ಎತ್ತರವಾದ ಲಿಂಗವನ್ನು ಸುಮಾರು ಕ್ರಿ.ಶ. ೨೦೦ರಲ್ಲಿ ಶಾತವಾಹನ ಚಕ್ರವರ್ತಿಗಳು ಪೂಜಿಸುತ್ತಿದ್ದರೆಂದು ಶಾಸನಗಳಿಂದ ಗೊತ್ತಾಗುತ್ತದೆ. ಈಗಿರುವ ದೇವಾಲಯವನ್ನು ಕದಂಬವಂಶದ ಮೃಗೇಶವರ್ಮನ ಹೆಂಡತಿಯಾದ ಪ್ರಭಾವತಿಯೆಂಬ ರಾಣಿಯೂ ಆಕೆಯ ಮಗನಾದ ರವಿವರ್ಮನೂ ಕಟ್ಟಿಸಿದರು; ಇದನ್ನು ಕಟ್ಟಿಸಿದ ಕಾಲ ಸುಮಾರು ಕ್ರಿ.ಶ. ೪೫೦. ಕಟ್ಟಡವು ಚೌಕಾಕಾರವಾಗಿದೆ; ಇದರ ಕಲ್ಲಿನ ಗೋಡೆಗಳಲ್ಲಿ ಅಲಂಕಾರ ಹೆಚ್ಚಾಗಿಲ್ಲ. ಮುಂದುಗಡೆಯಿರುವ ಅಂಕಣವನ್ನು ಬಿಜ್ಜಳನಿಗಿಂತಲೂ ಈಚೆಗೆ ಕಟ್ಟಿದುದು. ಈ ಗುಡಿಯ ಮುಂದೆ ೨೦ ಅಡಿಗಳ ದೂರದಲ್ಲಿ ಅಷ್ಟಕೋನಾಕಾರವಾದ ಎತ್ತರ

ವಾದೊಂದು ಕಂಬವಿದೆ. ಅದರಲ್ಲಿ ಸಂಸ್ಕೃತ ಭಾಷೆಯ ಶಾಸನವೊಂದನ್ನು ಕೆತ್ತಿದ್ದಾರೆ. ಈ ಶಾಸನದಲ್ಲಿ ಮಯೂರವರ್ಮನ ವಂಶದ ಬಗ್ಗೆ ಕೆಲವು ವಿವರಗಳು ತಿಳಿಯುತ್ತದೆ. ಈ ದೇವಸ್ಥಾನವನ್ನು ಹಳ್ಳಿಗರು ಪಣ್ಣಲಿಂಗಪ್ಪನ ಗುಡಿ ಎಂದು ಕರೆಯುತ್ತಾರೆ.

ಈ ಗುಡಿಯ ಬದಿಗೇ ಒಂದು ಕೆರೆಯಿದೆ. ಇದನ್ನು ವಡ್ಡಮ್ಮನ ಕೆರೆ ಎಂದು ಕರೆಯುತ್ತಾರೆ. ಇದರ ದಡದಲ್ಲಿರುವ ಪ್ರತಿಮೆಯೊಂದನ್ನು ಜನರು ವಡ್ಡಮ್ಮನೆಂದು ಈಗಲೂ ಪೂಜಿಸುತ್ತಾರೆ. ಇದು ಆ ಕೆರೆಯ ಅಭಿಮಾನದೇವತೆ. ಈ ಕೆರೆಯನ್ನು ಕದಂಬವಂಶದ ಕಾಕುಸ್ಥವರ್ಮನು ಕಟ್ಟಿಸಿದನೆಂದು ಹೇಳುತ್ತಾರೆ. ಇದರ ಬಳಿಯಲ್ಲಿಯೇ ದ್ರೋಣನಗುಡ್ಡ ಎಂಬ ಒಂದು ಪ್ರದೇಶವನ್ನು ತೋರಿಸುತ್ತಾರೆ. ಭೀಮನು ಬಕಾಸುರನನ್ನು ಕೊಂದದ್ದು ಈ ಗುಡ್ಡದ ಮೇಲೆಯೇ ಎಂದು ಹೇಳುತ್ತಾರೆ. ಬಕಾಸುರನ ವಧೆಯಾದದ್ದು ಪಾಂಡವಪುರದ ಬಳಿಯಿರುವ ಗುಡ್ಡದ ಬಳಿ ಎಂದೂ ಹೇಳುತ್ತಾರೆ.

ತಾಳಗುಂದದಲ್ಲಿ ಹಿಂದೆ ಬಹು ವಿಖ್ಯಾತವಾದ ಒಂದು ವಿದ್ಯಾಪೀಠವಿತ್ತು. ಮುಕುಂದನೇತ್ರನೆಂಬ ಕದಂಬವಂಶದ ರಾಜನು ೩೨೦೦೦ ಬ್ರಾಹ್ಮಣರಿಗೆ ಅಗ್ರಹಾರವೊಂದನ್ನು ನಿರ್ಮಿಸಿ ದಾನ ಮಾಡಿದನಂತೆ. ಇದು ಹಿಂದೆ ಇದ್ದ ಸ್ಥಳವೆಂದು ಈಗಲೂ ಒಂದು ಗುಡ್ಡದ ಪ್ರದೇಶವನ್ನು ತೋರಿಸುತ್ತಾರೆ.

ಈ ರೀತಿ ಬಳ್ಳಿಗಾವೆ ಹಾಗೂ ಅದರ ಸುತ್ತಮುತ್ತಿನ ಪ್ರದೇಶಗಳು ಈಗ ತುಂಬ ಸಣ್ಣ ಸಣ್ಣ ಹಳ್ಳಿಗರ ಪ್ರದೇಶವಾಗಿದ್ದರೂ ಹಿಂದೆ ಅವು ತುಂಬ ವೈಭವದಿಂದ, ಕೀರ್ತಿಯನ್ನು ಪಡೆದು ಮೆರೆದವು.

"ಕನ್ನಡ ನಾಡು ಮತ್ತು ಕನ್ನಡಿಗರ ಪರಂಪರೆ"

ಈ ಮಾಲೆ ಕನ್ನಡ ಪ್ರಕಾಶನದಲ್ಲಿಯೇ ಅಷ್ಟೇಕೆ ಭಾರತದ ಪ್ರಕಾಶನರಂಗದಲ್ಲಿಯೇ ಒಂದು ಮೈಲಿಗಲ್ಲಾದ ಐತಿಹಾಸಿಕ ದಾಖಲೆ. ಕರ್ನಾಟಕ ಸಂಸ್ಕೃತಿಯ ವಿವಿಧ ಶಾಖೆಗಳ ಬಗ್ಗೆ ಮಕ್ಕಳಿಗೂ ಹಾಗೂ ಜನಸಾಮಾನ್ಯರಿಗೂ ವಸ್ತುನಿಷ್ಠವಾಗಿಯೂ, ಸರಳವಾಗಿಯೂ ಮನದಟ್ಟು ಮಾಡಿಕೊಡುವ 600 ಶೀರ್ಷಿಕೆಗಳು ಪ್ರಕಟಗೊಂಡು, ಕರ್ನಾಟಕದ ಒಂದು ವಿಶ್ವಕೋಶವೇ ಆಯಿತು.

ಈ ಮಾಲೆಯ ಪುಸ್ತಕಗಳು ಬಹಳ ಜನಪ್ರಿಯವಾಗಿ ಕನ್ನಡಿಗರ ಮನೆಮಾತಾಗಿವೆ.

ಅನೇಕ ಶೀರ್ಷಿಕೆಗಳ ಪ್ರತಿಗಳು ಈಗಾಗಲೇ ಮುಗಿದು ಹೋಗಿದ್ದು, ಈ ಸರಣಿಯ ಪುಸ್ತಕಗಳಿಗೆ ಜನರಿಂದ ಪದೇಪದೇ ಒತ್ತಾಸೆ ಬರುತ್ತಿರುವುದರಿಂದ, ಇಂಥ ಪುಸ್ತಕಗಳನ್ನು ಹಂತ ಹಂತವಾಗಿ ಮರು ಮುದ್ರಿಸುವ ಯೋಜನೆ ಇದೆ.

ಈ ದಿಸೆಯಲ್ಲಿ ಮೂಡಿಬಂದುದಾಗಿದೆ ಈ ಪುಸ್ತಕ.

IBH

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009